"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾಪ್ರಕಟಣೆಗಾಗಿ ಉಪಯೋಗಿಸಕೂಡದು

# ಕರ್ನಾಟಕ ವಿಧಾನ ಪರಿಷತ್ತು

(158ನೇ ಅಧಿವೇಶನ)

ಗುರುವಾರ, 22ನೇ ಜನವರಿ 2026

## ವಿಷಯಾನುಕ್ರಮಣಿಕೆ (INDEX)


01. ಭಾರತ ಸಂವಿಧಾನದ ಪ್ರಸ್ತಾವನೆಯ ಬೋಧನೆ

02. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ

03. ವಿಧಾನಮಂಡಲವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ ಮತ್ತು ಆ ಸಂದರ್ಭದಲ್ಲಿನ ರಾಜ್ಯಪಾಲರ ನಡೆಯ ಬಗ್ಗೆ ಚರ್ಚೆ.

- ಶ್ರೀ ಎನ್.ಎಸ್.ಬೊಸರಾಜು (ಸಭಾನಾಯಕರು)
- ಶ್ರೀ ಎಸ್.ಎಲ್.ಭೋಜೇಗೌಡ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)

04. ಸಂತಾಪ ಸೂಚನೆ

"ಮಾಜಿ ಸಚಿವರು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶತಾಯುಷಿ ಡಾ: ಭೀಮಣ್ಣ ಖಂಡ್ರೆ ಇವರ ನಿಧನದ ಬಗ್ಗೆ."

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಶ್ರೀ ಶಶೀಲ್ ಜಿ.ನಮೋಶಿ
- ಡಾ: ಎಂ.ಜಿ.ಮುಳೆ
- ಶ್ರೀ ಅಡಗೂರು ಹೆಚ್.ವಿಶ್ವನಾಥ್
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಬಿ.ಕೆ.ಹರಿಪ್ರಸಾದ್
- ಡಾ: ಧನಂಜಯ ಸರ್ಜಿ
- ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಎಂ.ನಾಗರಾಜು
- ಶ್ರೀ ತಿಪ್ಪಣ್ಣಪ್ಪ ಕಮಕನೂರ
- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಭೀಮರಾವ್ ಬಸವರಾಜ್ ಪಾಟೀಲ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)


– – – – – –

(01) 22.01.2026 11.50 ಹೆಚ್‌ವಿ.ಆರ್‌ಎನ್

**ಕರ್ನಾಟಕ ವಿಧಾನ ಪರಿಷತ್ತು**

**ಗುರುವಾರ, 22ನೇ ಜನವರಿ, 2026**

**ಸದನವು ಬೆಂಗಳೂರಿನ ವಿಧಾನಸೌಧದಲ್ಲಿರುವ**

**ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಅಪರಾಹ್ನ 11 ಗಂಟೆ 51 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು**

**ಪೀಠದಲ್ಲಿ ಉಪಸ್ಥಿತರಿದ್ದರು**

**(ಸದನವು "ವಂದೇ ಮಾತರಂ" ಗೀತೆಯೊಂದಿಗೆ ಪ್ರಾರಂಭಗೊಂಡಿತು)**

**1. ಭಾರತ ಸಂವಿಧಾನದ ಪ್ರಸ್ತಾವನೆಯ ಬೋಧನೆ**

**(ಸನ್ಮಾನ್ಯ ಸಭಾಪತಿಯವರು ಸದನದಲ್ಲಿ ಈ ಕೆಳಕಂಡಂತೆ ಭಾರತದ ಸಂವಿಧಾನದ ಪ್ರಸ್ತಾವನೆಯನ್ನು ಬೋಧಿಸಿದರು)**

**ಭಾರತದ ಸಂವಿಧಾನ ಪ್ರಸ್ತಾವನೆ**

**ಭಾರತದ ಜನಗಳಾದ ನಾವು**

ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ ಸರ್ವಧರ್ಮ

ಸಮಭಾವದ ಪ್ರಜಾಸತ್ತಾತ್ಮಕ ಗಣ ರಾಜ್ಯವಾಗಿ ರಚಿಸಲು ಮತ್ತು ಅದರ

ಸಮಸ್ತ ನಾಗರಿಕರಿಗೆ;

**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ;**

**ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು**

**ಉಪಾಸನಾ ಸ್ವಾತಂತ್ರ್ಯ;**

**ಸ್ಥಾನಮಾನ ಹಾಗೂ ಅವಕಾಶ ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು ರಾಷ್ಟ್ರದ

ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ

**ಭ್ರಾತೃ ಭಾವನೆಯನ್ನು** ವೃದ್ಧಿಗೊಳಿಸಲು

ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ**

1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ

ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,**

**ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

## 2. ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳ ಮಂಡನೆ

**ಸಭಾಪತಿಯವರು:–** ಮಾನ್ಯ ಕಾರ್ಯದರ್ಶಿಯವರು ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸದನದ ಮುಂದೆ ಮಂಡಿಸುವುದು.

**ಕಾರ್ಯದರ್ಶಿ(ಕ.ವಿ.ಪ):–** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**(ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಲಗತ್ತಿಸಲಾಗಿದೆ)**

**೦3. ವಿಧಾನಮಂಡಲವನ್ನುದ್ದೇಶಿಸಿ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣ ಮತ್ತು ಆ ಸಂದರ್ಭದಲ್ಲಿನ ರಾಜ್ಯಪಾಲರ ನಡೆಯ ಬಗ್ಗೆ ಚರ್ಚೆ.**

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಇವತ್ತು ವಿಧಾನಮಂಡಲದಲ್ಲಿ ನಡೆದುಕೊಂಡ ರೀತಿಯನ್ನು ನಾವು [xxx]. ಅವರು ಸಂವಿಧಾನದ ಅನುಚ್ಛೇದ 163 ಮತ್ತು 176ಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇಡೀ ಕರ್ನಾಟಕ ಜನತೆಗೆ ಮತ್ತು ವಿಧಾನ ಮಂಡಲಕ್ಕೆ ಅಗೌರವವನ್ನು ತೋರಿಸಿದ್ದಾರೆ. ಅದನ್ನು ನಾವು ಪ್ರತಿಭಟಿಸುತ್ತಿದ್ದೇವೆ. ಕೇಂದ್ರ ಸರ್ಕಾರದ ಕೈಗೊಂಬೆಯಂತೆ ನಡೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ನಡೆದುಕೊಂಡ ರೀತಿ ಸರಿಯಿಲ್ಲ ಎಂದು ಹೇಳದ ಮೇಲೆ ಕಾರ್ಯದರ್ಶಿಯವರು ಹೇಗೆ ಅದನ್ನು ಮಂಡನೆ ಮಾಡುವುದಕ್ಕೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಒಂದು ನಿಮಿಷ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ.

**ಸಭಾಪತಿಯವರು:–** ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಒಂದು ಪ್ಯಾರಾ ಭಾಷಣ ಮಾಡಿದ್ದಾರೆ. ಮೊದಲನೆಯ ಮತ್ತು ಕೊನೆಯ ಸಾಲುಗಳನ್ನು ಓದಿದ್ದಾರೆ. ಇದರ ಅರ್ಥ read and recorded ಎಂದು ಆಗುತ್ತದೆ. ಅವರು ಭಾಷಣ ಮಾಡಿದಂತೆ ಆಗಿದೆ. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ

**[xxx] ಮಾನ್ಯ ಸಭಾಪತಿಯವರ ಆದೇಶಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.**

ಅವಕಾಶವನ್ನು ನೀಡಿದಂತಹ ಸಂದರ್ಭದಲ್ಲಿ ಭಾಷಣ ಮಾಡಿಲ್ಲ ಎನ್ನುವುದರ ಬಗ್ಗೆ ನೀವು ಚರ್ಚೆ ಮಾಡಬಹುದು. ಈಗ ಇದಕ್ಕೆ ನಾವೇನೂ ಮಾಡುವುದಕ್ಕೂ ಆಗುವುದಿಲ್ಲ. ಘನತೆವೆತ್ತ ರಾಜ್ಯಪಾಲರು ತಾವೇ ತೀರ್ಮಾನ ಮಾಡಿ ಭಾಷಣವನ್ನು ಓದಿದ್ದಾರೆ; ಒಂದು ಹತ್ತು ಸಾಲುಗಳನ್ನು ಅವರು ಓದಿದ್ದಾರೆ.

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ, ತಾವು ಈ ರೀತಿ ಹೇಳಬಾರದು. "ಅವರು ಓದಿದ್ದಾರೆ" ಎನ್ನುವುದನ್ನು ತಾವು ಹೇಳಬಾರದು. ಏಕೆಂದರೆ ಪೂರ್ಣ ಪ್ರಮಾಣದ ಭಾಷಣವನ್ನು ಅವರು ಓದಲಿಲ್ಲ; ಓದಿದ್ದಾರೆ ಎನ್ನುವುದನ್ನು ಆಡಳಿತ ಪಕ್ಷದವರೇ ಒಪ್ಪುತ್ತಿಲ್ಲ. ಆಡಳಿತ ಪಕ್ಷದವರು ಘನತೆವೆತ್ತ ರಾಜ್ಯಪಾಲರು ಅಗೌರವವನ್ನು ತೋರಿಸಿದ್ದಾರೆಂದು ಹೇಳುತ್ತಿದ್ದಾರೆ. ಇದರ ಅರ್ಥ ಭಾಷಣ ಅಪೂರ್ಣಗೊಂಡಿದೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಇಡೀ ಕರ್ನಾಟಕ ರಾಜ್ಯದ ಜನತೆಗೆ ಅಗೌರವವನ್ನು ತೋರಿದ್ದಾರೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ:–** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನದ ಅನುಚ್ಛೇದ 163 ಮತ್ತು 176ಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಎಲ್.ಭೋಜೇಗೌಡ:–** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು "ಅಗೌರವವನ್ನು ತೋರಿಸಿದ್ದಾರೆ" ಎಂದು ಹೇಳುತ್ತಿದ್ದಾರೆ. ಅಂದರೆ, ಆ ಭಾಷಣ ಅಪೂರ್ಣವಾಗಿದೆ. ಅದನ್ನು ಈ ಸದನದ ಮುಂದೆ ಕಾರ್ಯದರ್ಶಿಯವರು ಮಂಡನೆ ಮಾಡುವುದಕ್ಕೆ ಬರುವುದಿಲ್ಲ.

**(ಗೊಂದಲ)**

**ಶ್ರೀ ಸಲೀಂ ಅಹಮದ್(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಮೊದಲನೆಯ ಬಾರಿಗೆ ಕರ್ನಾಟಕದ ಇತಿಹಾಸದಲ್ಲಿ ಇಂತಹ ಅಹಿತಕರ ಘಟನೆ ನಡೆದಿಲ್ಲ, ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಹಾಗಾದರೆ ಅದರ ಬಗ್ಗೆ ಚರ್ಚೆಯಾಗಲಿ.

**ಸಭಾಪತಿಯವರು:-** ಇದೊಂದು ರೀತಿ ಗೊಂದಲದ ವಾತಾವರಣ ನಿರ್ಮಾಣವಾಗಿದೆ. ಈ ಸದನ ಮುಗಿದ ನಂತರ ಜಂಟಿ ಕಾರ್ಯಕಲಾಪಗಳ ಸಮಿತಿ ಸಭೆ ಇದೆ. ಅಲ್ಲಿ ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಂಡು, ನಾಳೆ ಬಂದು ತಿಳಿಸುತ್ತೇನೆ. ತಾವುಗಳು ಈ ವಿಷಯವನ್ನು ನಾಳೆ ಪ್ರಸ್ತಾಪ ಮಾಡಿ. ಈಗ ಸಂತಾಪ ಸೂಚನೆ ಪ್ರಸ್ತಾವನೆಯನ್ನು ತೆಗೆದುಕೊಳ್ಳೋಣ.

(ಮುಂದುವರಿದಿದೆ)

(02) 22.1.2026 12.00 ಪಿಕೆ:ಆರ್‌ಎನ್ (ಸಭಾಪತಿಗಳ ಉಪಸ್ಥಿತಿ)

**ಸಭಾಪತಿಯವರು:-** ಒಂದು ನಿಮಿಷ ನನ್ನ ಮಾತನ್ನು ಕೇಳಿ. ಈ ವಿಚಾರವಾಗಿ ಎರಡೂ ಕಡೆ ಗೊಂದಲವಿದೆ. ಇವತ್ತಿನ ಕಲಾಪ ಮುಗಿದ ನಂತರ ಕಾರ್ಯಕಲಾಪಗಳ ಜಂಟಿ ಸಲಹಾ ಸಮಿತಿಯ ಸಭೆ ಇದೆ. ಅಲ್ಲೇನು ತೀರ್ಮಾನವಾಗುತ್ತದೆ ಎಂದು ನಾಳೆ ಸದನಕ್ಕೆ ತಿಳಿಸುತ್ತೇನೆ. ಆ ನಂತರ ಈ ಕುರಿತು ಚರ್ಚೆ ಮಾಡೋಣ.

**4. ಸಂತಾಪ ಸೂಚನೆ:**

**ವಿಷಯ: ಮಾಜಿ ಸಚಿವರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶತಾಯುಷಿ ಡಾ: ಭೀಮಣ್ಣ ಖಂಡ್ರೆ ಇವರ ನಿಧನದ ಬಗ್ಗೆ.**

-------

**ಸಭಾಪತಿಯವರು:–** ಮಾಜಿ ಸಚಿವರು, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶತಾಯುಷಿ ಡಾ: ಭೀಮಣ್ಣ ಖಂಡ್ರೆ ಅವರು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಮಾಜಿ ಸಚಿವರು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶತಾಯುಷಿ ಡಾ: ಭೀಮಣ್ಣ ಖಂಡ್ರೆ ಅವರು ದಿನಾಂಕ:16.01.2026 ರಂದು ನಿಧನ ಹೊಂದಿರುತ್ತಾರೆ.

1925ರ ನವೆಂಬರ್ 1ರಂದು ಬೀದರ್ ಜಿಲ್ಲೆಯ ಭಾಲ್ಕಿಯಲ್ಲಿ ಜನಿಸಿ, 102 ವರ್ಷಗಳ ಪರಿಪೂರ್ಣ ಜೀವನವನ್ನು ಪೂರೈಸಿದ ಶ್ರೀಯುತರು ಬಿ.ಎ, ಎಲ್.ಎಲ್.ಬಿ. ಪದವಿಯನ್ನು ಹೊಂದಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಶ್ರೀಯುತರು ದೇಶದ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1953ರಲ್ಲಿ ಭಾಲ್ಕಿ ಪುರಸಭೆಗೆ ಅಧ್ಯಕ್ಷರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ರಂಗ ಪ್ರವೇಶಿಸಿದರು.

ಶ್ರೀಯುತರು 1962, 1967, 1978 ಮತ್ತು 1983ರಲ್ಲಿ ನಾಲ್ಕು ಅವಧಿಗೆ ಭಾಲ್ಕಿ ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಯ ಶಾಸಕರಾಗಿ, 1988 ರಿಂದ 1994 ಹಾಗೂ 1994 ರಿಂದ 2000ರ ಅವಧಿಗೆ 2 ಬಾರಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ. 1992 ರಿಂದ 1994ರವರೆಗೆ ಶ್ರೀಯುತರು ಶ್ರೀ ಎಂ. ವೀರಪ್ಪ ಮೊಯ್ಲಿಯವರ ಸಚಿವ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ಬೀದರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ, ಕರ್ನಾಟಕ ರಾಜ್ಯ ಕಿಸಾನ್ ಕೋಶದ ಸಂಚಾಲಕರಾಗಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಅಧ್ಯಕ್ಷರಾಗಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದ ಶ್ರೀಯುತರು ಹಳ್ಳಿಖೇಡದ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ ಮತ್ತು ಹುಣಜಿ ಮಹಾತ್ಮ ಗಾಂಧೀ ಸಕ್ಕರೆ ಕಾರ್ಖಾನೆಯ ಸ್ಥಾಪಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಗಡಿಭಾಗದ ಮಕ್ಕಳ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ ಶ್ರೀಯುತರು ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ದೊರಕಿಸಲು ಬೀದರ್‌ನಲ್ಲಿ ಅಕ್ಕಮಹಾದೇವಿ ಕಾಲೇಜು, ಬಾಲ್ಕಿಯಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿ ಸಾವಿರಾರು ಯುವಜನರ ಭವಿಷ್ಯ ರೂಪಿಸಿದ್ದರು. ನಿರ್ಲಕ್ಷ್ಯಕ್ಕೀಡಾಗಿದ್ದ

ಬಸವಕಲ್ಯಾಣ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ಶ್ರಮಿಸಿದ್ದರು. ಸುಮಾರು 60 ವರ್ಷಗಳ ಕಾಲ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಗಡಿಜಿಲ್ಲೆ ಬೀದರ್‌ನ ಅಭಿವೃದ್ಧಿಯ ಹರಿಕಾರರೆಂದು ಜನಜನಿತರಾಗಿದ್ದರು.

ಶ್ರೀಯುತರು ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಸಹಕಾರ ಕ್ಷೇತ್ರದಲ್ಲಿ ಮಾಡಿರುವ ಸಾಧನೆಗಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿರುತ್ತದೆ.

ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ರಾಜಕೀಯ ಮುತ್ಸದ್ದಿ, ಧೀಮಂತ ನಾಯಕರೊಬ್ಬರನ್ನು ಕಳೆದುಕೊಂಡಂತಾಗಿದೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಡಾ: ಭೀಮಣ್ಣ ಖಂಡ್ರೆಯವರು ದಿನಾಂಕ 16ನೇ ಜನವರಿ 2026ರಂದು ನಿಧನರಾದರು. ಅವರ ಪರಿಚಯ ಎಲ್ಲರಿಗೂ ಇದೆ. ಅವರು ಒಬ್ಬ ಧೀಮಂತ ನಾಯಕರಾಗಿದ್ದರು. ಅವರು ಬಿ.ಎ., ಎಲ್.ಎಲ್.ಬಿ., ಮುಗಿಸಿ ರಾಜಕೀಯ ರಂಗ ಪ್ರವೇಶ ಮಾಡಿದ್ದರು. ಪ್ರಥಮ ಬಾರಿಗೆ 1953ರಲ್ಲಿ ಭಾಲ್ಕಿ ಪುರಸಭಾ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ ಅವರು, ಹೈದರಾಬಾದ್–ಕರ್ನಾಟಕ ಭಾಗದಲ್ಲಿ ನಿಜಾಮರ, ರಜಾಕರ ವಿರುದ್ಧ ಹೋರಾಟ ಮಾಡುವಲ್ಲಿ ಮುಂದಾಳತ್ವ ವಹಿಸಿದ್ದರು. ಕರ್ನಾಟಕ ಏಕೀಕರಣದ ವಿಷಯದಲ್ಲಿ ಸಂಘಟನಾಪೂರ್ವಕವಾಗಿ ಸಾಕಷ್ಟು ಹೋರಾಟಗಳಿಗೆ ಮುಂದಾಳತ್ವ ವಹಿಸಿದ್ದರು. ಸಹಕಾರ ರಂಗದಲ್ಲಿ ತಮ್ಮ ಪ್ರಯತ್ನದಿಂದಾಗಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿಸಿ ರೈತರಿಗೆ ಅನುಕೂಲ ಮಾಡಿಕೊಡುವಂತಹ ಕೆಲಸ ಮಾಡಿದರು. ಕಾರಂಜಾ ಯೋಜನೆಯನ್ನು ನೀರಾವರಿಗಾಗಿ, ಅದರ ಅಭಿವೃದ್ಧಿಗಾಗಿ, ರೈತರ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಮಾಡಿದ್ದರು. ನೀರಾವರಿ ವಿಷಯಗಳಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಿದ್ದರು. 1982–83ರಲ್ಲಿ ಬೀದರ್‌ನ ಗ್ರಾಮಾಂತರ ಪ್ರದೇಶದಲ್ಲಿ ಉಪಚುನಾವಣೆ ನಡೆದಾಗ ನಾನು ಪ್ರಥಮ ಬಾರಿಗೆ ಹೋಗಿದ್ದೆ. ಅಲ್ಲಿ 10 ದಿನಗಳ ಕಾಲ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದೆವು. ಆಗ ಮಾನ್ಯ ಆರ್.ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದರು. ಮಾನ್ಯ ವೀರ್‌ಶೆಟ್ಟಿ ಕುಶ್ನೂರ್ ಮತ್ತು ಮಾನ್ಯ ಭೀಮಣ್ಣ ಖಂಡ್ರೆಯವರು ಆ ಭಾಗದ ಹಿರಿಯ ನಾಯಕರುಗಳಾಗಿದ್ದರು. ಯಾವುದೇ ಪ್ರದೇಶಗಳಿಗೆ ಹೋದರೂ ಅಲ್ಲಿನ ರೈತರು ಮಾನ್ಯ ಭೀಮಣ್ಣ ಖಂಡ್ರೆಯವರ ನಾಯಕತ್ವದ ಬಗ್ಗೆ, ಅವರಿಗೆ ರೈತರ ಬಗ್ಗೆ ಇದ್ದ ಕಾಳಜಿ ಕುರಿತು ಮಾತನಾಡುತ್ತಿದ್ದರು. ಮಾನ್ಯ ಭೀಮಣ್ಣ ಖಂಡ್ರೆಯವರ ನಾಯಕತ್ವದಲ್ಲಿ ಆ ಒಂದು ಉಪಚುನಾವಣೆಯನ್ನು ಗೆದ್ದಿದ್ದೆವು. ಹೀಗೆ ಅವರು, ಹೋರಾಟಗಳ ಜೊತೆ ಆ ಭಾಗದ ಅಭಿವೃದ್ಧಿಗಾಗಿ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದರು. ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ರಾಷ್ಟ್ರೀಯ ಅಧ್ಯಕ್ಷರೂ ಆಗಿದ್ದರು. 4 ಸಲ ವಿಧಾನಸಭೆಯ ಶಾಸಕರಾಗಿ, 2 ಸಲ ವಿಧಾನಪರಿಷತ್ತಿನ ಶಾಸಕರಾಗಿ, ಒಂದು ಬಾರಿ ಸಚಿವರಾಗಿ ಉತ್ತಮವಾದ ಕೆಲಸ ಮಾಡಿದ್ದರು. ಅವರು ತುಂಬಾ ನಿಷ್ಠುರವಾದಿಗಳಾಗಿದ್ದರು; ನ್ಯಾಯವಾದಿಗಳಾಗಿದ್ದರು. ನೇರವಾಗಿ ಮಾತನಾಡುವಂತಹ ಸ್ವಭಾವ ಹೊಂದಿದ್ದರು.

ಜನರ ಸೇವೆಗೆ ಸಂಬಂಧಪಟ್ಟಂತೆ ಇರಬಹುದು ಅಥವಾ ಸಾಮಾಜಿಕ ಸಂಘಟನೆ, ಹೋರಾಟಗಳಲ್ಲಿ ಉತ್ತಮ ರೀತಿಯಲ್ಲಿ ತೊಡಗಿಸಿಕೊಂಡಿದ್ದರು. ಅವರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಕೂಡ ಕೆಲಸ ಮಾಡಿದ್ದಾರೆ. ಎ.ಐ.ಸಿ.ಸಿ. ಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಹೀಗೆ ಅವರು ಎಲ್ಲಾ ರಂಗಗಳಲ್ಲಿ ಗುರುತಿಸಿಕೊಂಡಿದ್ದರು. 103 ವರ್ಷಗಳ ದೀರ್ಘಕಾಲ ಜೀವನ ನಡೆಸಿದ್ದ ಅವರ ಆತ್ಮಕ್ಕೆ ಆ ಭಗವಂತ ಶಾಂತಿಯನ್ನು ನೀಡಲಿ. ಅವರ ಕುಟುಂಬದವರಿಗೆ ಮತ್ತು ಅವರ ಅಭಿಮಾನಿಗಳಿಗೆ ಸನ್ಮಾನ್ಯರ ಅಗಲಿಕೆಯಿಂದ ಆಗಿರುವ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿ, ಮಾನ್ಯ ಸಭಾಪತಿಯವರು ತಂದಿರುವ ಸದರಿ ಪ್ರಸ್ತಾವನೆಯನ್ನು ಅನುಮೋದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಶಶಿಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ತಾವು ತಂದಿರುವ ಸಂತಾಪ ಸೂಚನೆಗೆ ನನ್ನ ಧ್ವನಿಗೂಡಿಸುತ್ತೇನೆ. ಡಾ: ಭೀಮಣ್ಣ ಖಂಡ್ರೆಯವರು ಕಲ್ಯಾಣ ಕರ್ನಾಟಕ ಭಾಗದ ಒಬ್ಬ ಅತ್ಯಂತ ಪ್ರಾಮಾಣಿಕ ಮತ್ತು ಹಿರಿಯ ನಾಯಕರಾಗಿ ಉತ್ತಮ ಕಾರ್ಯಗಳನ್ನು, ಅನೇಕ ಸಾಧನೆಗಳನ್ನು ಮಾಡಿದ್ದರು. 1953ರಲ್ಲಿ ಭಾಲ್ಕಿ ಪುರಸಭೆಯ ಅಧ್ಯಕ್ಷರಾಗಿದ್ದರು. 4 ಬಾರಿ ವಿಧಾನಸಭೆಯ ಮತ್ತು 2 ಬಾರಿ ವಿಧಾನ ಪರಿಷತ್ತಿನ ಶಾಸಕರಾಗಿದ್ದರು. ಅವರು ವೀರಶೈವ ಲಿಂಗಾಯತ ಸಮಾಜವನ್ನು ಕಳಕಳಿಯಿಂದ ಕಟ್ಟಿದ್ದರು. 12 ವರ್ಷಗಳು ಅಧ್ಯಕ್ಷರಾಗಿದ್ದ ಅವರು, ಮಹಾರಾಷ್ಟ್ರ, ತೆಲಂಗಾಣ, ಆಂಧ್ರಪ್ರದೇಶಗಳಿಗೆ ಭೇಟಿ ಕೊಟ್ಟಿದ್ದೇ ಅಲ್ಲದೇ ದೇಶದ ವೀರಶೈವ ಲಿಂಗಾಯತ ಸಮಾಜವನ್ನು ಒಂದುಗೂಡಿಸುವ ಕೆಲಸ ಮಾಡಿದ್ದರು. ಅವರಲ್ಲಿ ಒಂದು ವಿಶೇಷತೆ ಇತ್ತು. ಅವರು ಆಡಳಿತ ಪಕ್ಷದ ಕಡೆ ಇರಲಿ ಅಥವಾ ವಿರೋಧ ಪಕ್ಷದ ಕಡೆ ಇರಲಿ, ರೈತರ ಪರವಾಗಿ, ಬಡವರ ಪರವಾಗಿ ಹೋರಾಟ ಮಾಡಿ, ಅದನ್ನು ಯಶಸ್ವಿಗೊಳಿಸದೇ ಬಿಡುತ್ತಿರಲಿಲ್ಲ. ಆ ರೀತಿಯ ಒಬ್ಬ ಧೀಮಂತ ನಾಯಕರಾಗಿದ್ದರು. ಒಬ್ಬ ಶಾಸಕನಾಗಿ, ಒಬ್ಬ ಮಂತ್ರಿಯಾಗಿ ಏನು ಮಾಡಬಹುದು ಎನ್ನುವ ಒಂದು ಒಳ್ಳೆಯ ಉದಾಹರಣೆಯನ್ನು ತೋರಿಸಿ ಕೊಟ್ಟಿದ್ದಾರೆ. ಬೀದರ್‌ನಲ್ಲಿ ಅವರ ಶಿಕ್ಷಣ ಸಂಸ್ಥೆಗಳಿದ್ದರೂ ಕೂಡ, ಗ್ರಾಮಾಂತರ ಪ್ರದೇಶಗಳ ಮಕ್ಕಳಿಗೆ ಇಂಜಿನಿಯರಿಂಗ್ ಶಿಕ್ಷಣ ಕೊಡಬೇಕೆಂದು ಅಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡುತ್ತಾರೆ. ಮಹಿಳೆಯವರಿಗೆಂದು ಅಕ್ಕ ಮಹಾದೇವಿ ಡಿಗ್ರಿ ಕಾಲೇಜನ್ನು ಪ್ರಾರಂಭ ಮಾಡುತ್ತಾರೆ. ಹೀಗೆ ಹಲವಾರು ಭಾಗಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, ಶಿಕ್ಷಣ ರಂಗದಲ್ಲೂ ಒಳ್ಳೆಯ ಹೆಸರು ಮಾಡಿದ್ದರು. ಕಾರಂಜಾ ನೀರಾವರಿ ಯೋಜನೆಯನ್ನು ಪೂರ್ತಿಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ಕೂಡ ಪ್ರಯತ್ನ ಮಾಡಿದ್ದರು. ಜೊತೆಗೆ, ಸಹಕಾರ ಚಳುವಳಿ ಮೂಲಕ 2 ಸಕ್ಕರೆ ಕಾರ್ಖಾನೆಗಳನ್ನು ಕೂಡ ಪ್ರಾರಂಭ ಮಾಡಿ, ಉತ್ತಮ ರೀತಿಯಲ್ಲಿ ನಡೆಸಿದ್ದರು. ಅವರು ಧೈರ್ಯಸ್ಥರು ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಅವರು ಯಾವುದೇ ವಿಷಯಗಳನ್ನು ಮಾತನಾಡುವಾಗ ಹಿಂದೆ-ಮುಂದೆ ನೋಡುತ್ತಿರಲಿಲ್ಲ. ಇವತ್ತು ಸದನದಲ್ಲಿ ಒಂದು ವಿಷಯ ಹೇಳುವುದು ಪ್ರಸ್ತುತ ಅನಿಸುತ್ತದೆ. ಮಾನ್ಯ ಹಾವನೂರು ಆಯೋಗದ ವರದಿಯಲ್ಲಿ ಶೇಕಡ 75ರಷ್ಟು ಮೀಸಲಾತಿ ಕೊಡಬೇಕು ಎನ್ನುವ

ಪ್ರಸ್ತಾವನೆ ಇದ್ದುದನ್ನು ನೋಡಿ, ಆ ವರದಿಯನ್ನು ಇದೇ ಸದನದಲ್ಲಿ ಹರಿದು ಹಾಕಿ ದಿಟ್ಟತನವನ್ನು ತೋರಿದ್ದರು. ಒಳ್ಳೆಯದೆನಿಸಿದ್ದು ಅಥವಾ ನ್ಯಾಯಯುತವಾಗಿ ಕಂಡದ್ದನ್ನು ಅವರು ಪ್ರತಿಪಾದನೆ ಮಾಡುತ್ತಿದ್ದರು. ಇದೇ ಸದನದಲ್ಲಿ ನಾನು ಮೊದಲನೆ ಬಾರಿ, ಮೊದಲನೆ ದಿವಸ ಬಂದಾಗ ಬಾವಿಯೊಳಗೆ ಹೋಗಬೇಕಾಗಿ ಬಂತು.

(ಮುಂದು)

(3) 22-1-2026 12.10 ಡಿಎಸ್-ವಿಕೆ (ಸಭಾಪತಿಯವರ ಉಪಸ್ಥಿತಿ)

ಶ್ರೀ ಶಶೀಲ್ ಜಿ.ನಮೋಶಿ(ಮುಂದು):-

ಏಳು ಗಂಟೆಯಾದ ಮೇಲೆ ಸದನ ಮುಗಿಯಿತು. ಸದನ ಮುಗಿದ ಮೇಲೆ ಆಡಳಿತ ಪಕ್ಷದವರು ಊಟ ತರಿಸುವುದು ಎಂದು ನಾವೆಲ್ಲಾ ಲೆಕ್ಕಚಾರ ನೋಡುತ್ತಿದ್ದಾಗ, ಅವರು ತಮ್ಮದೊಂದು ಬ್ರೀಫ್‌ಕೇಸ್ ಇಟ್ಟುಕೊಂಡು ಇನ್ನೂ ಏಳೂಕಾಲು ಗಂಟೆ ಆಗಿಲ್ಲ ಇಲ್ಲೇ ಮಲಗಿಕೊಂಡುಬಿಟ್ಟರು. ಅವರು ಊಟದ ಬಗ್ಗೆ ವಿಚಾರ ಮಾಡಲಿಲ್ಲ. ಅಂದರೆ, ಒಬ್ಬ ನಾಯಕ ಹೇಗೆ ಇರಬೇಕು ಎನ್ನುವುದನ್ನು ಜನರಿಗೆ ತೋರಿಸಿಕೊಟ್ಟಂಥವರು ಮಾನ್ಯ ಭೀಮಣ್ಣ ಖಂಡ್ರೆಯವರು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅವರ ಅಗಲಿಕೆಯಿಂದ ರಾಷ್ಟ್ರಕ್ಕೆ, ನಮ್ಮ ಭಾಗಕ್ಕೆ, ವಿಶೇಷವಾಗಿ ವೀರಶೈವ ಲಿಂಗಾಯತ ಸಮಾಜಕ್ಕೆ ನಷ್ಟ ಉಂಟಾಗಿರುವುದು ಯಾರಿಂದಲೂ ತುಂಬುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಿ ತಾವು ತಂದಿರುವ ಸಂತಾಪ ಸೂಚನೆಗೆ ನಾನು ಕೂಡ ಧ್ವನಿಗೂಡಿಸುತ್ತೇನೆ.

**ಡಾ|| ಎಂ.ಜಿ.ಮುಳೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶ್ರೀಯುತ ಲೋಕನಾಯಕ ಭೀಮಣ್ಣ ಖಂಡ್ರೆಯವರ ಸಂತಾಪ ಸೂಚನೆ ಏನು ಬಂದಿದೆ, ಅದಕ್ಕೆ ನಾನು ಸಹಮತ ಸೂಚಿಸುತ್ತಾ ಎರಡು ಮಾತುಗಳನ್ನು ಹೇಳಬಯಸುತ್ತಿದ್ದೇನೆ. ಬೀದರ್ ಜಿಲ್ಲೆಯಿಂದ ರಾಜಕೀಯ, ಸಾಮಾಜಿಕ, ಸಹಕಾರ, ಶಿಕ್ಷಣ, ಧಾರ್ಮಿಕ, ಯಾವುದೇ ಅಂಗವನ್ನು ತೆಗೆದುಕೊಂಡರೂ ಕೂಡ ಡಾ||ಭೀಮಣ್ಣ ಖಂಡ್ರೆಯವರ ಅಪಾರವಾದ ಕೊಡುಗೆ ಇದೆ. ನಾವು ಜಲ, ನೆಲ, ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಮಾತನಾಡುತ್ತೇವೆ. ಈ ಎಲ್ಲಾ ಶಬ್ಧಗಳು ಡಾ|| ಭೀಮಣ್ಣ ಖಂಡ್ರೆಯವರ ಕರ್ತೃತ್ವಕ್ಕೆ, ಕಾರ್ಯಕ, ಅದಕ್ಕೆ ಪೂರ್ತಿಯಾಗಿ ಸ್ಪಂದಿಸುತ್ತಾ ಬೀದರ್ ಕಲ್ಯಾಣ ಕರ್ನಾಟಕ, ನಿಜಾಮ್ ರಾಜ್ಯದವರ ಒಂದು ಭಾಗ ಇತ್ತು, Linguistic State ಆಗುವ ಪರಿಯಲ್ಲಿ ಬೀದರ್ ಜಿಲ್ಲೆಯ ಕೆಲವು ಭಾಗಗಳು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಹೋರಾಟ ನಡೆಯುತ್ತಿತ್ತು. ನಮ್ಮಂಥ ಮರಾಠಿ ಭಾಷೆಯ ಜನ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಬಹಳ ದೊಡ್ಡ ಹೋರಾಟ ನಡೆಯುತ್ತಿತ್ತು. ಕರ್ನಾಟಕ ಏಕೀಕರಣ ಆಗಬೇಕೆಂದು ಸಂಘಟನೆ ಕಟ್ಟಿ ಜನರ ಮನವೊಲಿಸಿ ಇವತ್ತು ಬೀದರ್ ಜಿಲ್ಲೆ ಕರ್ನಾಟಕದಲ್ಲಿ ಇದೆ ಎಂದರೆ ಅದು ಡಾ||ಭೀಮಣ್ಣ ಖಂಡ್ರೆಯವರ ಸಂಘರ್ಷ, ಚಾತುರ್ಯದಿಂದ ಜನ ಮನವೊಲಿಸಿದರು. ಕರ್ನಾಟಕ ನಾಡಿನ ಬಗ್ಗೆ, ಕನ್ನಡ ನುಡಿಯ ಬಗ್ಗೆ, ನಿಜಾಮರ ರಾಜ್ಯ ಇತ್ತು, ಉರ್ದು ಅಧಿಕೃತ ಭಾಷೆ ಇತ್ತು, ಅವರು ಉರ್ದುವನ್ನು ಕಲಿತಿದ್ದರು. ಆ ಕಾಲದಲ್ಲಿ

ಗಡಿನಾಡು ಪ್ರದೇಶದಲ್ಲಿ ಕನ್ನಡ ಶಾಲೆಯನ್ನು ತೆರೆದು ಕನ್ನಡ ಭಾಷೆ ಬಗ್ಗೆ ಪ್ರಚಾರ ಮಾಡುವ ಕೆಲಸ ಡಾ॥ ಭೀಮಣ್ಣ ಖಂಡ್ರೆಯವರೇ ಮಾಡುತ್ತಿದ್ದರು. ಕಮಾಲ್‌ನಗರ ಎಂದು ಮಹಾರಾಷ್ಟ್ರ ರಾಜ್ಯ ೮ ಕಿ.ಮೀ.ನಿಂದ ಪ್ರಾರಂಭವಾಗುತ್ತದೆ. ಆ ಕಾಲದಲ್ಲಿ ಕನ್ನಡ ಶಾಲೆ, ಪದವಿ ಕಾಲೇಜನ್ನು ಪ್ರಾರಂಭ ಮಾಡಿದರು. ಈ ಪ್ರಕಾರ ಅದು ಯಾವುದೇ ಕ್ಷೇತ್ರವಾಗಿರಲಿ, ಈಗಾಗಲೇ ಮಾನ್ಯ ಶಶೀಲ್ ಜಿ.ನಮೋಶಿಯವರು ಹೇಳಿದರು. ಮೊಟ್ಟ ಮೊದಲು ಬೀದರ್‌ನಲ್ಲಿ ಅಕ್ಕಮಹಾದೇವಿ ಮಹಿಳಾ ಕಾಲೇಜನ್ನು ಪ್ರಾರಂಭ ಮಾಡಿದರು. ಬಾಲ್ಕಿಯಲ್ಲಿ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭ ಮಾಡಿದರು. ಡಾ॥ ಭೀಮಣ್ಣ ಖಂಡ್ರೆಯವರು ವಿಶೇಷವಾಗಿ ನಾಲ್ಕು ಸಲ ಎಂ.ಎಲ್.ಎ. ಆಗಿದ್ದರು, ಒಂದು ಸಲ ಸಚಿವರಾಗಿದ್ದರು, ಎರಡು ಸಲ ಎಂ.ಎಲ್.ಸಿ. ಆಗಿದ್ದರು. ಯಾವಾಗಲೂ ಅವರು ವ್ಯವಸ್ಥೆಯ ಜೊತೆಯಲ್ಲಿ ಹೊಂದಾಣಿಕೆಯಾಗಿರಲಿಲ್ಲ. No diplomacy and no adjustment, ನೇರ ನುಡಿ, ಅವರ ಅಂತರಂಗ ಏನು ಹೇಳುತ್ತದೆಯೋ ಅದನ್ನೇ ಮಾಡುತ್ತಿದ್ದರು, ಹೊಂದಾಣಿಕೆಯಾಗುತ್ತಿರಲಿಲ್ಲ. ಅವರು ವ್ಯವಸ್ಥೆಯ ವಿರುದ್ಧ ಹೋಗಿ ಇಷ್ಟೆಲ್ಲಾ ಕೆಲಸ ಮಾಡಿದ್ದಾರೆ. ಅವರು ಶಿಕ್ಷಣದಲ್ಲಿ ಇಂಜಿನಿಯರಿಂಗ್ ಕಾಲೇಜು, ಸಹಕಾರ ಕ್ಷೇತ್ರದಲ್ಲಿ ಎರಡೆರಡು ಸಕ್ಕರೆ ಕಾರ್ಖಾನೆಗಳಿದ್ದವು. ಜಲಸಂಪನ್ಮೂಲದಲ್ಲಿ ಕಾರಂಜಾ ಪ್ರಾಜೆಕ್ಟ್, ನಾರಂಜಾ ಪ್ರಾಜೆಕ್ಟ್, ಹೀಗೆ ಅವರು ಬಹು ಆಯಾಮದ ವ್ಯಕ್ತಿಯಾಗಿದ್ದರು. ಬೀದರ್ ಜಿಲ್ಲೆಗೆ ಅವರ ಬಹಳ ದೊಡ್ಡ ಕೊಡುಗೆ ಇದೆ. ಅವರಿಗೆ ಸಂಘರ್ಷವು ಇತ್ತು. ರೈತರ ಸಲುವಾಗಿ ಕಿಸಾನ್ ಆಂದೋಲನವನ್ನು ಮಾಡಿದ್ದರು. ಈ ರೀತಿ ಅವರು ಜೀವನವನ್ನು ನಡೆಸಿದ್ದರು. ಅವರನ್ನು ಜನರು ಅಷ್ಟೇ ಪ್ರೀತಿ ಮಾಡುತ್ತಿದ್ದರು. ಅವರನ್ನು ಫಾಲೋ ಮಾಡುತ್ತಿದ್ದರು. ತುರ್ತು ಪರಿಸ್ಥಿತಿಯ ಕಾಲದಲ್ಲಿ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್‌ಗೆ ಒತ್ತಾಯ, ಜಬರ್ದಸ್ತ್, ಹಿಂಸೆ ಮಾಡುತ್ತಿದ್ದರು. ಅವರು ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಮಾಡಿಸಿಕೊಳ್ಳಿ ಎಂದು ಹೇಳಿ ಒಂದು ಕರೆ ಕೊಟ್ಟ ತಕ್ಷಣ ಒಂದೇ ದಿವಸದಲ್ಲಿ 25,000 ಜನರು ಸ್ವಯಂ ಪ್ರೇರಣೆಯಿಂದ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಅನ್ನು ಮಾಡಿಸಿಕೊಂಡರು. ಇದು ಒಂದು ದಾಖಲೆಯಾಗಿದೆ. ರಾಜ್ಯದಲ್ಲಿ ಅಲ್ಲ, ಇಡೀ ದೇಶದಲ್ಲಿ ಸ್ವಯಂ ಪ್ರೇರಣೆಯಿಂದ ಆಗಿದೆ. ಯಾರದ್ದೂ ಒತ್ತಾಯ, ಜಬರ್ದಸ್ತ್, ಇಲ್ಲ. ಅಧಿಕಾರಿಗಳು ತಮ್ಮ ಟಾರ್ಗೆಟ್ ಅನ್ನು ಮುಟ್ಟುವ ಸಲುವಾಗಿ ಜನರಿಗೆ ಜಬರ್ದಸ್ತ್, ಮಾಡುತ್ತಿದ್ದರು. ಅದನ್ನು ಅವರಿಗೆ ಸಹಿಸುವುದಕ್ಕಾಗಲಿಲ್ಲ. ನಿಮಗೆ ಟಾರ್ಗೆಟ್ ಬೇಕಾ, ಆಪರೇಷನ್ ಮಾಡಿಸಬೇಕಾ ಆಪರೇಷನ್ ಮಾಡಿ ಎಂದು ಹೇಳಿ 25,000 ಜನರು ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ ಅನ್ನು ಮಾಡಿಸಿಕೊಂಡರು. ಇಂತಹ ಅದ್ಭುತವಾದ ಏಕೀಕರಣದ ಕೆಲಸವನ್ನು ಅವರ ಕಾಲದಲ್ಲಿ ಮಾಡಿದರು. ಈಗಾಗಲೇ ಮಾನ್ಯ ಸಭಾನಾಯಕರು ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು ಎಂದು ಹೇಳಿದರು. ಶ್ರೀಮತಿ ಇಂದಿರಾಗಾಂಧಿ, ಶ್ರೀಯುತ ರಾಜೀವ್‌ಗಾಂಧಿ, ಶ್ರೀ ರಾಹುಲ್ ಗಾಂಧಿ, ಇವರೆಲ್ಲರೂ ಬಾಲ್ಕಿಗೆ ಬಂದು ವಿಶಾಲ ಜನಸಭಾ ಸಂಭ್ರಮಿಸಿ ಸಮಾವೇಶ ಮಾಡಿ ಹೋದರು. ದೆಹಲಿಯಲ್ಲಿರುವ ಜನಪ್ರತಿನಿಧಿಗೆಳೆಲ್ಲರೂ ಬಾಲ್ಕಿಗೆ ಬಂದಿದ್ದರು. ಅವರು ಎಲ್ಲಾ ಕ್ಷೇತ್ರದಲ್ಲೂ ಇದ್ದರು, ಯಾವ ಕ್ಷೇತ್ರದಲ್ಲಿ ಎಂದೇನೂ ಇಲ್ಲ. ಜನರು ಅವರಿಗೆ ಲೋಕನಾಯಕ, ಜನನಾಯಕ ಎಂದರು. ಈ ರೀತಿ ಬೀದರ್ ಜಿಲ್ಲೆಗೆ ಬಹಳ ದೊಡ್ಡ ಕೊಡುಗೆಯನ್ನು ನೀಡಿದ್ದಾರೆ,

ಅವರು ಶತಾಯುಷಿಯಾದರು. ಅದರ ಜೊತೆಯಲ್ಲಿ ಅಪ್ಪಟ ಶರಣ ಜೀವಿ, ಕಾಯಕ ಜೀವಿ, ಇಡೀ ಜೀವನದಲ್ಲಿ ಯಾವುದು ಬಸವ ತತ್ವದಲ್ಲಿ ಇಲ್ಲ. ಅಂತಹ ಆಚಾರ, ವಿಚಾರ, ಊಟವೂ ಇಲ್ಲ. ವರ್ಷಾನುಗಟ್ಟಲೆ ಅವರು ಫಲಾಹಾರದಲ್ಲಿದ್ದರು. ಅವರ ಜೊತೆಯಲ್ಲಿ ಬಹಳ ನನ್ನ ಒಡನಾಟ ಇತ್ತು. ಅವರಿಂದ ನನಗೆ ರಾಜಕೀಯವಾಗಲಿ, ಸಾಮಾಜಿಕವಾಗಿಯಾಗಲಿ ಸಹಾಯವಾಗಿದೆ. ನಾನು ಅವರನ್ನು ಹತ್ತಿರದಿಂದ ನೋಡಿದ್ದೇನೆ. ಶರಣ ತತ್ವದಲ್ಲಿ, ಶರಣ ಜೀವದಲ್ಲಿ, ಬಸವ ತತ್ವದಲ್ಲಿ ಕಾಯ, ವಾಚಾ, ಮನಸಾ ಅದು ಯಾವುದನ್ನು ಅವರು ಮಾಡಿಲ್ಲ. ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ ಎಂದು ಹೇಳುತ್ತಾರಲ್ಲಾ ಅದು ಡಾ॥ ಭೀಮಣ್ಣ ಖಂಡ್ರೆಯವರ ರೂಪ. ಈ ಪ್ರಕಾರ ಆಗಿದೆ. ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ. ಬೀದರ್ ಜಿಲ್ಲೆ ಇಡೀ ಕಲ್ಯಾಣ ಕರ್ನಾಟಕ, ಇಡೀ ನಮ್ಮ ಬಸವ ಕಲ್ಯಾಣ ಅನುಭವ ಮಂಟಪವಾಗಬೇಕಾದರೆ ಶ್ರೀ ಚೆನ್ನಬಸವ ಸ್ವಾಮೀಜಿಯವರು ಅಲ್ಲಿ ಬರಬೇಕಾದರೆ ಡಾ॥ ಭೀಮಣ್ಣ ಖಂಡ್ರೆಯವರು ಕಾರಣಕರ್ತರಾಗಿದ್ದಾರೆ. ಅವರೇ ಸಂಘರ್ಷ. Nonstop and no rest. ಬಸ್ ಸಿಕ್ಕಿದರೆ ಬಸ್ ಮೋಟಾರ್ ಸೈಕಲ್ ಸಿಕ್ಕಿದರೆ ಮೋಟಾರ್ ಸೈಕಲ್, ಇದೇ ಬೇಕು ಎಂದೇನೂ ಇಲ್ಲ. 'Touch the ground' ಈ ರೀತಿ ಅವರ ಜೀವನ ಇತ್ತು. ಅವರು ಬಹಳ ದೊಡ್ಡ ವ್ಯಕ್ತಿ ಎಂದು ಹೇಳುತ್ತಾರೆ. ನಾನು ಇದಕ್ಕೆ ಸಂಪೂರ್ಣವಾಗಿ ಸಹಮತ ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಅಡಗೂರ್ ಹೆಚ್.ವಿಶ್ವನಾಥ್ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಶತಾಯುಷಿ ಡಾ॥ ಭೀಮಣ್ಣ ಖಂಡ್ರೆಯವರು ಬೀದರ್ ಭಾಗದಿಂದ ಬಂದಂಥವರು. ಶ್ರೀ ಎಂ.ವೀರಪ್ಪ ಮೊಯ್ಲಿ ಸರ್ಕಾರದಲ್ಲಿ ನಾನು, ಅವರು ಒಟ್ಟಿಗೆ ಕೆಲಸ ಮಾಡಿದಂಥವರು. ಆ ಸಂದರ್ಭದಲ್ಲಿ ಅವರು ಸಾರಿಗೆ ಸಚಿವರಾಗಿದ್ದರು, ನಾನು ಅರಣ್ಯ ಸಚಿವನಾಗಿದ್ದೆ. ಇರುವ ವಿಚಾರವನ್ನು ಇದ್ದಹಾಗೆ ಹೇಳಬೇಕೆಂದರೆ ನಾನು ಡಾ॥ ಭೀಮಣ್ಣ ಖಂಡ್ರೆಯವರನ್ನು ಅನುಸರಿಸಿದ್ದೆ. ಡಾ॥ ಭೀಮಣ್ಣ ಖಂಡ್ರೆಯವರು ಏನು ನಡೆಯುತ್ತಿದೆ ಅದನ್ನು ಹೇಳುವುದಕ್ಕೆ ನಮಗೇನು ಕಷ್ಟ ಎಂದು ಹೇಳುತ್ತಿದ್ದರು. ಆಗ ಆ ಭಾಗದಲ್ಲಿ ಕನ್ನಡ ಮಾತನಾಡುವುದು ಬಹಳ ಕಷ್ಟ. ಹಡಗು ಎಂದು ಹೇಳುವುದಕ್ಕೆ ಅವರು ಹಡಗ ಎಂದು ಹೇಳುತ್ತಿದ್ದರು. ಎಂಟೂವರೆ ಗಂಟೆ ಎಂದು ಹೇಳುವುದಕ್ಕೆ ಪೌಣೆ ಆಟ್ ಎಂದು ಹೇಳುತ್ತಿದ್ದರು. ಕನ್ನಡ ಭಾಷೆಯನ್ನು ಆ ಭಾಗದಲ್ಲಿ ಹೆಚ್ಚು ಜನಮನದಲ್ಲಿ ತರುವುದಕ್ಕೂ ಕೂಡ ಅವರು ಕಾರಣೀಭೂತರಾಗಿದ್ದಂಥವರು. ಅವರು ಬಹಳ ಧೈರ್ಯವಂತರು. ಅವರು ನನ್ನ ಪಕ್ಕದ ರೂಮ್‌ನಲ್ಲೇ ಇದ್ದರು. ಅವರ ರೂಮ್ ತುಂಬಾ ಬರೀ ಗೂಡುಗೂಡೇ ಹಣ್ಣು ಇರುತ್ತಿತ್ತು. ಚಪಾತಿ, ರೊಟ್ಟಿ ಏನು ಇರುತ್ತಿರಲಿಲ್ಲ. ಅವರು ಬರೀ ಹಣ್ಣು ತಿನ್ನುತ್ತಿದ್ದರು. ಬಹುಶಃ ಅವರು 104 ವರ್ಷ ಬದುಕಬೇಕೆಂದರೆ ಅವರ ಆಹಾರ ಪದ್ಧತಿಯೂ ಕೂಡ ಅವರಿಗೆ ಸಹಾಯ ಮಾಡಿದೆ. ಬೇರೆ ಇನ್ನೇನೂ ಇಲ್ಲ, ಅವರು ಬರೀ ಹಣ್ಣು ತಿನ್ನುತ್ತಿದ್ದರು. ನಾವೇನಾದರೂ ಕೊಟ್ಟರೆ, ನೀನು ಬರಬೇಕಾದರೆ ಹಣ್ಣು ತಂದುಬಿಡು, ನನಗೆ ಬೇರೆ ಕೊಡಬೇಡ ಎಂದು ಹೇಳುತ್ತಿದ್ದರು. ಅವರು ಬಹಳ ನೇರವಾಗಿ ಮಾತನಾಡುತ್ತಿದ್ದಂತಹ ಮನುಷ್ಯರು. ಹಾಗಾಗಿ ಅವರು ರಾಜಕಾರಣಿಗಳಿಗೆ ಆದರ್ಶವಾಗಿದ್ದರು. ಅವರು ಎಂದೂ ಕೂಡ ರಾಜಕಾರಣಿಯಾಗಿ ಕೈ ಶುದ್ಧವಾಗಿಟ್ಟುಕೊಂಡಿದ್ದವರು. ಮನಸ್ಸನ್ನು

ಶುದ್ಧವಾಗಿಟ್ಟುಕೊಂಡಿದ್ದವರು. ಅವರು ಮಾಡಿರುವ ಒಂದು ವಿಚಾರಕ್ಕೆ ನಾವೆಲ್ಲರೂ ಕೊನೆಯವರೆಗೂ ವಿರೋಧ ಮಾಡುತ್ತಾ ಬಂದೆವು. ಅದೇನೆಂದರೆ, ಹಾವನೂರ್ ಕಮಿಷನ್ ವರದಿಯನ್ನು ಸದನದಲ್ಲೇ ಸುಡುವುದಕ್ಕೆ ಪ್ರಯತ್ನ ಮಾಡಿದರು. ನಾವೆಲ್ಲಾ ಬಹಳ ವಿರೋಧ ಮಾಡಿದೆವು. ಏಕೆಂದರೆ ಶ್ರೀ ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ಹಾವನೂರು ಕಮಿಷನ್ ವರದಿ ಬಂದಿತು. ಇವತ್ತೇನಾದರೂ ನಮ್ಮ ಮನೆಗಳಲ್ಲಿ ನಮ್ಮ ಮಕ್ಕಳು ಅಥವಾ ನಮ್ಮ ಅಳಯಂದಿರು ಡಿ.ಸಿ., ಎ.ಸಿ., ತಹಸೀಲ್ದಾರ್ ಆಗಿದ್ದಾರೆ ಎಂದರೆ it's just because of the Havanur Commission Report. That was effectively implemented by Sri Devaraj Urs, the then Chief Minister of Karnataka.

(ಮುಂದು)

**(4) 22/01/2026 12:20 ಎಸ್‌ಪಿಆರ್/ವಿಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಅಡಗೂರು ಹೆಚ್.ವಿಶ್ವನಾಥ್ (ಮುಂದು):-**

ಆ ಮೂಲಕ ನಾಡಿಗೆ ಹಾಗೂ ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗದವರಿಗೆ ನೀಡಿದ ಸಂದರ್ಭದಲ್ಲಿ, ವರದಿಯನ್ನು ಸುಡುವುದಕ್ಕೆ ಪ್ರಯತ್ನ ಮಾಡಿದ್ದು ಬಹುಶಃ ಈ ನಾಡು ಹಾಗೂ ಯಾರೂ ಸಹ ಮೆಚ್ಚಲಿಲ್ಲ. ಆದರೂ ಸಹ ಯಾರು ಮೆಚ್ಚುತ್ತಾರೆಯೋ ಬಿಡುತ್ತಾರೆಯೋ, ಅದನ್ನು ಸುಡುವುದಕ್ಕೆ ಪ್ರಯತ್ನ ಪಟ್ಟರು. ನಾನು ಶಿಕ್ಷಣ ಮಂತ್ರಿ ಇದ್ದಾಗ, ಶ್ರೀಯುತರು ರಾಜ್ಯದ ಗಡಿ ಭಾಗದಲ್ಲಿ ಕನ್ನಡ ಭಾಷೆಯನ್ನು ಪ್ರಚಾರ ಮಾಡಬೇಕೆಂದು ಹೇಳಿ ಕನ್ನಡ ಕಾನ್ವೆಂಟ್ ಶಾಲೆಗಳನ್ನು ಶುರು ಮಾಡಿದರು. ಇದಕ್ಕೆಲ್ಲಾ ಅವರು ಹೆಚ್ಚು ಪ್ರೋತ್ಸಾಹವನ್ನು ಕೊಟ್ಟಿದ್ದರು. ಶತಾಯುಷಿಗಳಾದ ಡಾ॥ ಭೀಮಣ್ಣ ಖಂಡ್ರೆರವರು ಇವತ್ತಿನ ದಿವಸ ನಮ್ಮ ಜೊತೆ ಇಲ್ಲ. ಆದರೆ, ಅವರು ಮಾಡಿರುವ ಕೆಲಸ ನಮ್ಮ ಜೊತೆಗೆ ಇದೆ ಎನ್ನುವುದನ್ನು ಹೇಳುತ್ತಾ, ಅವರ ಸಂತಾಪ ಸೂಚನೆಗೆ ಸಹಮತ ವ್ಯಕ್ತಪಡಿಸುತ್ತಾ, ಅದನ್ನು ಸಮರ್ಪಣೆ ಮಾಡುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಸಲೀಂ ಅಹಮದ್ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇವತ್ತು ಮಂಡಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ಡಾ॥ ಭೀಮಣ್ಣ ಖಂಡ್ರೆಯವರು ಒಬ್ಬ ಅಪರೂಪದ ಸೈದ್ಧಾಂತಿಕ ರಾಜಕಾರಣಿ. ಬಹುಶಃ 30-35 ವರ್ಷದಿಂದ ನಾನು ಅವರನ್ನು ಬಲ್ಲೆ. ನಾನು ವಿದ್ಯಾರ್ಥಿ ಕಾಂಗ್ರೆಸ್‌ನ ಅಧ್ಯಕ್ಷನಾಗಿದ್ದಾಗ ಅವರು ಶ್ರೀ ಎಂ. ವೀರಪ್ಪ ಮೋಯ್ಲಿ ರವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಆ ಸಂದರ್ಭದಲ್ಲಿ ಬಸ್ಸಿನ ಸಮಸ್ಯೆಗಳಿದ್ದವು. ಬಸ್ ಪಾಸ್‌ನ ದರವನ್ನು ಜಾಸ್ತಿ ಮಾಡುತ್ತಿದ್ದರು. ಆಗ ನಾವು ಅವರನ್ನು ಭೇಟಿ ಮಾಡಿ, ಇದರ ಬಗ್ಗೆ ವಿವರಣೆಯನ್ನು ನೀಡುತ್ತಿರುವಾಗ, ಅವರು ನಿಜವಾಗಿಯೂ ವಿದ್ಯಾರ್ಥಿಗಳ ಸಹಕಾರಕ್ಕೆ ಬಂದು ಬಸ್ ಪಾಸ್ನ ದರಗಳನ್ನು ಕಡಿಮೆ ಮಾಡಿ, ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಶಕ್ತಿ ಕೊಟ್ಟಂತಹ ಒಬ್ಬ ಧೀಮಂತ ನಾಯಕರಾಗಿದ್ದರು. ಅವರು ತಮ್ಮ ಜಿಲ್ಲೆಯಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡುವುದರ ಜೊತೆಗೆ ಸಾರಿಗೆ ಸಚಿವರಾಗಿ ಹಲವಾರು ವಿಚಾರಗಳಲ್ಲಿ ಹಲವಾರು

ಬದಲಾವಣೆಗಳನ್ನು ತಂದರು. ಯಾವತ್ತಿಗೂ ಸಹ ಇವರ ಬಗ್ಗೆ ಯಾರೂ ಸಹ ಟೀಕೆ ಮಾಡುತ್ತಿರಲಿಲ್ಲ. ಇವರು ಬಹಳ ವೇಗವಾಗಿ ಮಾತನಾಡುತ್ತಿದ್ದರು. ಸದನದಲ್ಲಿಯೂ ಸಹ ಅವರು ಹಾಗೆಯೇ ಮಾತನಾಡುತ್ತಿದ್ದರು. ಈ ವಿಚಾರದ ಬಗ್ಗೆ ಬಹಳಷ್ಟು ಸದಸ್ಯರು "ಸರ್ ಸ್ವಲ್ಪ ಸ್ಲೋ ಆಗಿ ಮಾತನಾಡಿ" ಎಂಬುದಾಗಿ ಬಂದು ಹೇಳುತ್ತಿದ್ದರು. ಇವರು ಸಚಿವರಾಗಿ ಇದೇ ಸದನದಲ್ಲಿ ಮಾತನಾಡುತ್ತಿದ್ದರು. ಕೆಲವರಿಗೆ ಇವರ ಭಾಷೆ ಅರ್ಥವಾಗುತ್ತಿರಲಿಲ್ಲ. "ರೀ ಭಾರೀ ಪರೇಶಾನ್ ಆಗಿಬಿಟ್ಟೀನ್ರೀ" ಎಂಬುದಾಗಿ ಹೇಳುತ್ತಿದ್ದರು. ಅವರ ಇಂತಹ ಮಾತುಗಳನ್ನು ಅರ್ಥಮಾಡಿಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತಿತ್ತು.

**ಸಭಾಪತಿಯವರು:–** ಅವರು ಮಾತನಾಡುವಾಗಲೆಲ್ಲಾ ಜಿಲ್ಲಾಧಿಕಾರಿಗಳಿಗೆ "ಪಂಥ್ ಪ್ರಧಾನ್" ಎಂಬುದಾಗಿ ಹೇಳುತ್ತಿದ್ದರು.

**ಶ್ರೀ ಸಲೀಂ ಅಹಮದ್:–** ಮಾನ್ಯ ಸಭಾಪತಿಯವರೆ, ಅವರು ಸಾಯುವ ಎರಡು ದಿನಗಳ ಮುಂಚೆ ಬೀದರ್‌ಗೆ ಹೋಗಿ ಅವರನ್ನು ಭೇಟಿ ಮಾಡಿದ್ದೆನು. ಅವರು ಮೃತರಾದ ನಂತರವೂ ಸಹ ನಾನು ಅಲ್ಲಿಗೆ ಹೋಗಿದ್ದೆನು. ಆಗ ಅಲ್ಲಿ ಸಾವಿರಾರು ಜನರು ಅವರ ಅಂತಿಮ ದರ್ಶನ ಪಡೆಯಲು ಬರುತ್ತಿದ್ದರು. ಏಕೆಂದರೆ, ಅವರ ಇಡೀಯಾದ ಜೀವನದಲ್ಲಿ ಅವರು ಯಾವತ್ತಿಗೂ ಸಹ ಬದಲಾವಣೆಯಾಗಲಿಲ್ಲ. ಸಿದ್ಧಾಂತಗಳನ್ನು ಇಟ್ಟುಕೊಂಡು ರಾಜಕಾರಣ ಮಾಡಿದ ಒಬ್ಬ ಧೀಮಂತ ನಾಯಕ. ಇವರು ವಿಶೇಷವಾಗಿ ಯುವಕರಿಗೆ ದಾರಿದೀಪವಾಗಿದ್ದರು ಎಂದು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಮಾಜಿ ಸಚಿವರು, ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರಾಗಿದ್ದ ಶತಾಯುಷಿ ಡಾ॥ ಭೀಮಣ್ಣ ಖಂಡ್ರೆ ರವರ ನಿಧನಕ್ಕೆ ಸಂಬಂಧಿಸಿದಂತೆ ಪ್ರಸ್ತಾಪಿಸಿರುವ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಇವರ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಚ್ಛಿಸುತ್ತೇನೆ. ಹಿರಿಯ ಸದಸ್ಯರಾದ ಶ್ರೀ ಅಡಗೂರ್ ಹೆಚ್.ವಿಶ್ವನಾಥ್ ರವರು ಈಗಾಗಲೇ ಬಹಳಷ್ಟು ವಿಚಾರಗಳ ಬಗ್ಗೆ ಹೇಳಿದ್ದಾರೆ. ಇವರ ಹಾಗೂ ನನ್ನ ಸಂಬಂಧ ಸುಮಾರು 50–52 ವರ್ಷಗಳಿಂದ ಇದೆ. 1976 ನೇ ಇಸವಿಯಲ್ಲಿ ಶ್ರೀ ಸಂಜಯ್ ಗಾಂಧಿರವರು ಬೀದರ್ ಜಿಲ್ಲೆಗೆ ಭೇಟಿ ನೀಡಿದಾಗ, ಆಗ ರಾಜಕೀಯ ಸ್ಪರ್ಧೆ ಬಹಳ ಇತ್ತು. ಒಂದು ಕಡೆ ಶ್ರೀ ವಿಶ್ವನಾಥ್‌ರವರು ಹಾಗೂ ಮತ್ತೊಂದು ಕಡೆ ನಾವು ಇದ್ದೆವು. ಅವರು ದೇವರಾಜ ಅರಸುರವರ ಕಡೆ ಹಾಗೂ ನಾವು ಇನ್ನೊಂದು ಕಡೆ ಎಂಬುದಾಗಿ ರಾಜಕಾರಣ ಮಾಡುತ್ತಿದ್ದೆವು. ಶ್ರೀಯುತ ಸಂಜಯ್ ಗಾಂಧಿರವರು ಬಂದಾಗ ಭಾಲ್ಕಿಯಲ್ಲಿ ಯಾವುದೇ ಸೌಲಭ್ಯಗಳಿಲ್ಲದೇ ಒಂದು ಲಕ್ಷ ಜನರನ್ನು ಸೇರಿಸಿ, ಅವರ ಶಕ್ತಿ ಏನು ಎನ್ನುವುದನ್ನು ಪ್ರದರ್ಶನ ಮಾಡಿದ್ದರು. ಇವರು ಬಹಳ ಸರಳ ಜೀವಿಯಾಗಿದ್ದು, ಗಾಂಧಿವಾದಿ ಮತ್ತು ಕಡೆಯವರೆಗೂ ಸಹ ಇವರು ಖಾದಿಯನ್ನೇ ತೊಟ್ಟು ಅವರ ಸರಳತೆಯನ್ನು ಮೆರೆದವರು. ಏಕೆಂದರೆ ಕೆಲವರು ಮಂತ್ರಿಯಾದ ತಕ್ಷಣ ಯಾವ ಯಾವ ತರಹ ಇರುತ್ತಾರೆ ಎಂಬುದು ನಮಗೂ, ನಿಮಗೂ ಮತ್ತು ಎಲ್ಲರಿಗೂ ಗೊತ್ತಿರುವುದಾಗಿದೆ. ಅವರು ಆ

ರೀತಿಯಾದ ಯಾವುದೇ ಅಹಂ ಇಲ್ಲದೇ ಎಲ್ಲರ ಜೊತೆಗೂ ಸಹ ಸರಳವಾಗಿದ್ದರು. ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರು ಹೇಳಿದಂತೆ, ಹಲವು ಅಚಾತುರ್ಯಗಳೂ ಸಹ ನಡೆದು ಹೋದವು. ಹಿಂದುಳಿದ ವರ್ಗದ ಆಯೋಗದ ವರದಿ ಬಂದ ನಂತರ, ..., ಪ್ರಜಾಪ್ರಭುತ್ವದಲ್ಲಿ ಅದು ಸಹಜ. ಕೆಲವು ವಿಚಾರಗಳನ್ನು ನಾವು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು. ಇದಕ್ಕೆ ಪ್ರತಿಭಟನೆ ಮಾಡತಕ್ಕದ್ದು ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಅದನ್ನು ಬಿಟ್ಟರೆ, ಅವರ ರಾಜಕೀಯ ಚರಿತ್ರೆಯಲ್ಲಿ ಇನ್ಯಾವುದೇ..., ಏಕೆಂದರೆ, ಹಾವನೂರುರವರ ವರದಿಯನ್ನು ಸುಡಲು ಪ್ರಯತ್ನಿಸಿದರು ಎಂದು ಅವರ ಸಮುದಾಯದಲ್ಲಿ ಬಹಳ ಸಂತೋಷವಾಗಿರಬಹುದು. ಆದರೆ, ಅವರ ಸರಳ ಜೀವನ ಏನಿತ್ತು ಅಂದರೆ ಒಬ್ಬ ಸಾಮಾನ್ಯ ಮನುಷ್ಯನ ಬಗ್ಗೆ ಅವರಿಗೆ ಏನು ಕಾಳಜಿ ಇತ್ತು ಅದನ್ನು ಯಾರೂ ಸಹ ಮರೆಯುವಂತಿಲ್ಲ. ಏಕೆಂದರೆ, ನನ್ನ ಅದೃಷ್ಟ ಏನು ಎಂದು ಹೇಳಿದರೆ, ನಾನು ಅವರ ಜೊತೆಗೂ ಸಹ ಕೆಲಸ ಮಾಡಿದೆ. ಅವರ ಮಗ ಶ್ರೀ ಈಶ್ವರ ಖಂಡ್ರೆ ರವರು ನಮ್ಮ ಜೊತೆ ಸೇವಾ ದಳದಲ್ಲಿದ್ದರು. ಇವರ ಮೊಮ್ಮಗ ಸಂಸತ್ತಿನಲ್ಲಿ ನಮ್ಮ ಜೊತೆಗೆ ಇದ್ದಾರೆ. ಅಂದರೆ ಅವರ ಮೂರು ತಲೆಮಾರುಗಳನ್ನು ನಾನು ನೋಡಿದ್ದೇನೆ. ಯಾರಿಗೂ ಸಹ ರಾಜಕೀಯದ ಅಧಿಕಾರ ನಮ್ಮಲ್ಲಿದೆ ಎಂದು ಹೇಳಿ, ಅಹಂ ಎನ್ನುವುದನ್ನು ಯಾವತ್ತೂ ಸಹ ತೋರಿಸಿರಲಿಲ್ಲ. ಒಂದು ಸರಳವಾದ ಜೀವನವನ್ನು ಅವರು ನಡೆಸಿದವರು. ಶ್ರೀ ಅಡಗೂರು ಹೆಚ್.ವಿಶ್ವನಾಥ್ ರವರಿಗೆ ಗೊತ್ತಿದೆ. ಹಾವನೂರು ವರದಿಯನ್ನು ಸುಟ್ಟ ನಂತರ ಕಾಂಗ್ರೆಸ್ ಪಕ್ಷವು ದೇವರಾಜ ಅರಸು ಮತ್ತು ರೆಡ್ಡಿ ಕಾಂಗ್ರೆಸ್ ಎಂದು ಇಬ್ಭಾಗವಾಯಿತು. 1978 ನೇ ಇಸವಿಯಲ್ಲಿ 178 ಜನರು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಆಗ 178 ಜನರ ಪೈಕಿ ರೆಡ್ಡಿ ಕಾಂಗ್ರೆಸ್‌ನಿಂದ ಡಾ॥ ಭೀಮಣ್ಣ ಖಂಡ್ರೆ ರವರು ಒಬ್ಬರು ಮಾತ್ರವೇ ಗೆದ್ದಿದ್ದು. ಇನ್ನೊಬ್ಬರು ಮುನ್ನೇಗೌಡ ಎಂಬುವವರು ಹೊಸಕೋಟೆಯಲ್ಲಿ ತಮ್ಮ ಠೇವಣಿಯನ್ನು ಉಳಿಸಿಕೊಂಡರು. ಇವರೂ ಸಹ ಎಂ.ಎಲ್.ಸಿ. ಆಗಿದ್ದರು. ಬಾಕಿಯವರು ಯಾರೂ ಸಹ ಒಂದು – ಒಂದೂವರೆ ಸಾವಿರದ ಮೇಲೆ ಮತವನ್ನು ಪಡೆಯಲೇ ಇಲ್ಲ ಅಂದರೆ ಅವರು ಅಷ್ಟು ಪ್ರಭಾವಶಾಲಿಗಳಾಗಿದ್ದರು. ಇವರು ಸೈದ್ಧಾಂತಿಕವಾಗಿ ಯಾವುದಾದರೂ ವಿಚಾರವನ್ನು ಕೈಗೊಂಡರೆ, ಯಾವುದೇ ರೀತಿಯಾದ ರಾಜಿಯನ್ನು ಮಾಡಿಕೊಳ್ಳುತ್ತಿರಲಿಲ್ಲ. ಹಾಗೆ ನೋಡುವುದಕ್ಕೆ ಹೋದರೆ, ಅವರು ಶ್ರೀ ಆರ್.ಗುಂಡೂರಾವ್ ರವರ ಜೊತೆಗೂ ಸಹ ಇದ್ದರು. ಆ ನಂತರದಲ್ಲಿ ಶ್ರೀ ವೀರಪ್ಪ ಮೋಯ್ಲಿ ರವರೊಂದಿಗೆ ಇದ್ದು, ಇವರಿಗೆ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದರು. ಸೈದ್ಧಾಂತಿಕವಾಗಿ ಯಾವುದೇ ವಿಚಾರವಿದ್ದರೂ ಸಹ ಯಾರಾದರೂ ಸಾಮಾಜಿಕ ನ್ಯಾಯ ಎಂದು ಬಂದಾಗ ಅವರ ಜೊತೆ ನಿಂತು ಮಾತನಾಡಿದ್ದಾರೆ. ಸಂವಿಧಾನದ ಬಗ್ಗೆ ಹೆಚ್ಚಿನ ಗೌರವವನ್ನು ಇಟ್ಟುಕೊಂಡಿದ್ದರು. ಅದರಲ್ಲೂ ಸಹ ಇಂದಿರಾ ಗಾಂಧಿಯವರ ಬಗ್ಗೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದರು. ಅವರ ಅಗಲಿಕೆ ಕೇವಲ ಕಾಂಗ್ರೆಸ್ ಪಕ್ಷಕ್ಕೆ ಅಲ್ಲ; ರಾಜ್ಯಕ್ಕಲ ಇಡೀ ರಾಷ್ಟ್ರಕ್ಕೆ ಒಂದು ದೊಡ್ಡ ನಷ್ಟವಾಗಿದೆ. ಅವರ ಕುಟುಂಬದ ಸದಸ್ಯರಿಗೆ ಭಗವಂತ ಅವರ ಅಗಲಿಕೆಯ ನೋವನ್ನು ಭರಿಸುವಂತ ಶಕ್ತಿಯನ್ನು ಕೊಡಲಿ ಎಂದು ಹೇಳಿ ತಮ್ಮ ಮೂಲಕ ನಾನು ಪ್ರಾರ್ಥಿಸುತ್ತೇನೆ.

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಡಾ॥ ಭೀಮಣ್ಣ ಖಂಡ್ರೆ ರವರು ನಾಲ್ಕು ಬಾರಿ ಎಂ.ಎಲ್.ಎ. ಆಗಿ ಹಾಗೂ ಎರಡು ಬಾರಿ ಎಂ.ಎಲ್.ಸಿ. ಆಗಿ ಹಾಗೂ ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಸುಮಾರು 122 ವರ್ಷದ ಇತಿಹಾಸವಿರುವ ಅಖಿಲ ಭಾರತೀಯ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಊಟ ಹಾಳಾದರೆ ಒಂದು ದಿನದ ನಷ್ಟ, ಬೆಳೆ ಹಾಳಾದರೆ ಒಂದು ವರ್ಷದ ನಷ್ಟ, ವಿದ್ಯೆ ಹಾಳಾದರೆ ಇಡೀ ಜೀವನವೇ ನಷ್ಟ ಎನ್ನುವ ಮಾತನ್ನು ಅಕ್ಷರಶಃ ಮನಸ್ಸಿಗೆ ತೆಗೆದುಕೊಂಡ ವ್ಯಕ್ತಿತ್ವ ಅವರದ್ದು. ಅವರ ಜೀವನದ ಒಂದು ಸನ್ನಿವೇಶವನ್ನು ಉಲ್ಲೇಖಿಸಲಿಚ್ಛಿಸುತ್ತೇನೆ. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿದ್ದ ಅವರು ಜನರ ಪರವಾಗಿ ಅನ್ಯಾಯ ಮತ್ತು ದೌರ್ಜನ್ಯದ ಮೇಲೆ ಹೋರಾಟವನ್ನು ಮಾಡಬೇಕಾದರೆ ಆಗ ಭಯದ ವಾತಾವರಣ ಇದ್ದಾಗ ಅವರಿಗೆ ಜೈಲು ಆಗುತ್ತದೆ. ಆಗ ಅವರು ಜೈಲನ್ನೂ ಸಹ ಒಂದು ಪಾಠಶಾಲೆಯನ್ನಾಗಿ ಮಾರ್ಪಾಡು ಮಾಡಿದ ನಿಜವಾದ ನಾಯಕರು. ಸಣ್ಣದಾದ ಹಾಗೂ ಕತ್ತಲಾದ ಜೈಲು ಕೋಣೆಯಲ್ಲಿ ಬಂದ ಯುವಕರು ನಿರಾಶರಾಗಿ ಕೋಪದಿಂದ ಕೂಗುತ್ತಿದ್ದರೆ, ಡಾ॥ ಭೀಮಣ್ಣ ಖಂಡ್ರೆ ರವರು ಮಾತ್ರ ಶಾಂತಿಯುತ ಹಾಗೂ ಮೌನವಾಗಿದ್ದ ವ್ಯಕ್ತಿಯಾಗಿದ್ದರು. ಇವರು ತಮ್ಮ ದೇಹವನ್ನು ಜನರು ಬಂಧಿಸಬಹುದು ಆದರೆ, ಮನಸ್ಸನ್ನು ಬಂಧಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದರು. ಜನರ ಮನಸ್ಸನ್ನು ಗಾಂಧೀಜಿಯವರ ಆದರ್ಶವಾದ ಹಾಗೂ ಬಸವಣ್ಣನವರ ತತ್ವವಾದವನ್ನು ಹೇಳಿ, ಅವರನ್ನು ತಿದ್ದಿದ ಒಬ್ಬ ವ್ಯಕ್ತಿಯಾಗಿದ್ದರು. ಖೈದಿಗಳಿಗೆ ಜೈಲನ್ನು ಈ ರೀತಿಯಾಗಿ ಪಾಠಶಾಲೆಯನ್ನಾಗಿ ಮಾರ್ಪಾಡು ಮಾಡಿದಾಗ, ಜೈಲಿನ ಅಧಿಕಾರಿಗಳು ಏಕೆ ಸಮಯವನ್ನು ವ್ಯರ್ಥ ಮಾಡುತ್ತೀಯಾ ಎಂಬುದಾಗಿ ಅವರನ್ನು ಕೇಳಿದಾಗ, ಅವರು "ಶಿಕ್ಷಣಕ್ಕೆ ಅತಿ ದೊಡ್ಡ ಶಕ್ತಿಗಳಿವೆ" ಎಂಬುದಾಗಿ ಉತ್ತರಿಸುತ್ತಾರೆ. "ಸರ್ಕಾರಗಳು ಬದಲಾಗಬಹುದು, ಜೈಲುಗಳು ಮಾಯವಾಗಬಹುದು ಆದರೆ, ಜಾಗೃತ ಮನಸ್ಸು ತಲೆಮಾರನ್ನು ಬದಲಾಯಿಸುತ್ತದೆ" ಎಂಬ ಉತ್ತರವನ್ನು ನೀಡಿದ ವ್ಯಕ್ತಿಯಾಗಿದ್ದರು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಬಹುಶಃ ಕರ್ನಾಟಕ ರಾಜ್ಯದಲ್ಲಿನ ರಾಜಕಾರಣಿಗಳಲ್ಲಿ ಶತಾಯುಷಿಗಳಾದ ಅಪರೂಪಾತಿ ಅಪರೂಪ. ಇವರು ವಿಶೇಷವಾಗಿ ಉತ್ತರ ಕರ್ನಾಟಕದ ಬಹಳ ಹಿರಿಯ ರಾಜಕಾರಣಿ. 1925 ರಲ್ಲಿ ಜನನವಾಗಿದ್ದು, 102 ವರ್ಷಗಳ ದೀರ್ಘಾಯುಷಿ ಹಾಗೂ ಶತಾಯುಷಿ. ತುಂಬು ಜೀವನವನ್ನು ನಡೆಸಿದ ಅತ್ಯಂತ ಸರಳ ಜೀವಿ ಮತ್ತು ಶಿಕ್ಷಣ ಪ್ರೇಮಿ. ಧರ್ಮಧೀರು. ಇದೆಲ್ಲವೂ ಆಗಿರುವ ಡಾ॥ ಭೀಮಣ್ಣ ಖಂಡ್ರೆಯವರನ್ನು ನಾನು ವಿದ್ಯಾರ್ಥಿ ಪರಿಷತ್‌ನಲ್ಲಿ ಇದ್ದಾಗ ಅನೇಕ ಸಾರಿ ಅವರ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿದ್ದೇನೆ. ಇವರು ಮಾಡಿರುವ ರೂರಲ್ ಇಂಜಿನಿಯರಿಂಗ್ ಕಾಲೇಜು, ಭಾಲ್ಕಿ ಇದರ ಪರಿಣಾಮವಾಗಿ ಉತ್ತರ ಕರ್ನಾಟಕದ ನೂರಾರು, ಸಾವಿರಾರು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಯನ್ನು ಪಡೆಯುವುದಕ್ಕೆ ಹಾಗೂ ಇಂಜಿನಿಯರ್‌ಗಳಾಗುವುದಕ್ಕೆ ಸಾಧ್ಯವಾಯಿತು.

(ಮುಂದು)

(005)22-01-2025/12-30/**bkp-bns** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್(ಮುಂದು)**

ಅಂತಹ ಒಬ್ಬ ಶಿಕ್ಷಣ ಪ್ರೇಮಿ ಮತ್ತು ಮಹಿಳೆಯರಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಅವರು ಕೊಡುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ, ಬೀದರ್‌ನಲ್ಲಿರುವ ಅಕ್ಕಮಹಾದೇವಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಬಿ.ಇಡಿ. ಕಾಲೇಜು, ಟಿ.ಸಿ.ಹೆಚ್. ಕಾಲೇಜು ಹಾಗೂ ಡಿಪ್ಲೊಮಾ ಕಾಲೇಜು, ಐ.ಟಿ.ಐ. ಕಾಲೇಜು, ಈ ರೀತಿಯಲ್ಲಿನ ಎಲ್ಲಾ ಕೋರ್ಸ್‌ಗಳನ್ನು ಅವರ ಶಿಕ್ಷಣ ಸಂಸ್ಥೆಗಳಲ್ಲಿ ನಾವು ನೋಡಬಹುದಾಗಿತ್ತು. ಅವರ ಮಗನಾದ ಶ್ರೀ ವಿಜಯಕುಮಾರ್ ಖಂಡ್ರೆಯವರು ಸೇರಿದಂತೆ ಅವರ ಕುಟುಂಬವು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಶ್ರೀ ವಿಜಯಕುಮಾರ್ ಖಂಡ್ರೆಯವರು ಒಂದು ಬಾರಿ ಎಂ.ಎಲ್.ಎ. ಕೂಡ ಆಗಿದ್ದರು. ಜೊತೆಗೆ ಧಾರ್ಮಿಕವಾಗಿ ಹೇಳುವುದಾದರೆ, ಮಠ ಮಂದಿರಗಳಿಗೆ ಹೆಚ್ಚು ಆಧಾರವಾಗಿ ನಿಂತಿದ್ದಂತಹ ಒಂದು ನಾಯಕತ್ವವನ್ನು ಅವರು ಹೊಂದಿದ್ದರು. ಅಲ್ಲಿನ ಮಠಾಧೀಶರಿಗೆ, ಅಲ್ಲಿನ ಮಠಗಳಿಗೆ ಸಾಕಷ್ಟು ಬಾರಿ ಹೋಗುವಂತಹದ್ದು, ಬರುವಂತಹದ್ದು, ಮಠಗಳು ಮುಂದೆ ಬರುವಂತಹದ್ದು, ಮೌಲ್ಯಗಳನ್ನು ಪ್ರತಿಷ್ಠಾಪನೆ ಮಾಡುವಂತಹದ್ದು, ಆ ಒಂದು ಹಿನ್ನೆಲೆಯಲ್ಲಿ ಆ ಭಾಗದಲ್ಲಿ ಸಾಕಷ್ಟು ಕೆಲಸಗಳನ್ನು ಅವರು ಮಾಡಿದ್ದಾರೆ. ನಾನು ಆ ಭಾಗದಲ್ಲಿ ಪ್ರವಾಸ ಮಾಡತಕ್ಕಂತಹ ಸಂದರ್ಭದಲ್ಲಿ ನಾನು ಈ ಎಲ್ಲಾ ಕೆಲಸಗಳನ್ನು ನೋಡುತ್ತಿದ್ದೆ. ಅವರು ಸಾರಿಗೆ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಈ ಕಲ್ಯಾಣ ಕರ್ನಾಟಕದಲ್ಲಿ ವಿಶೇಷವಾಗಿ ಟಿಕೆಟ್ ರಹಿತ ಪ್ರಯಾಣಿಕರಿಗೆ 500 ರೂಪಾಯಿಗಳ ದಂಡ ಎಂದು ದೊಡ್ಡದಾಗಿ ಅಂದರೆ ನೀವು ದೂರದಿಂದ ಫೋಟೋವನ್ನು ತೆಗೆದರೂ ಸಹಿತ ಆ ಬೋರ್ಡ್ ಬರಬೇಕು. ಅಷ್ಟು ದೊಡ್ಡದಾಗಿ, ಅದನ್ನು ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಮೇಲೆ ಪ್ರಿಂಟ್ ಮಾಡಿಸಿದ್ದರು. ಏಕೆಂದರೆ ಟಿಕೆಟ್ ರಹಿತ ಪ್ರಯಾಣವನ್ನು ಜಾಸ್ತಿ ಮಾಡುತ್ತಾರೆ. ಇದನ್ನು ತಡೆಗಟ್ಟಬೇಕೆಂದು ಹೇಳಿ ಈ ರೀತಿಯಲ್ಲಿ ಮಾಡಲಾಯಿತು. ಆ ಒಂದು ವಿಚಾರದಲ್ಲಿ ಒಂದು ನಿರ್ದಾಕ್ಷಿಣ್ಯ ಕ್ರಮವನ್ನು ತೆಗೆದುಕೊಂಡು ಮತ್ತು ಉತ್ತರ ಕರ್ನಾಟಕ ಭಾಗದಲ್ಲಿ ಸಾರಿಗೆ ಸ್ವಲ್ಪಮಟ್ಟಿಗೆ ಅಭಿವೃದ್ಧಿ ಹೊಂದಿದ್ದರೆ ಅದು ಇವರ ಕಾಲದಲ್ಲಿ ಅಭಿವೃದ್ಧಿಯಾಯಿತು. ಈ ರೀತಿಯಲ್ಲಿ ಅನೇಕ ಕೆಲಸಗಳನ್ನು ಶೈಕ್ಷಣಿಕವಾಗಿ ಮಾಡಿದ್ದಾರೆ, ರಾಜಕೀಯವಾಗಿ ಮಾಡಿದ್ದಾರೆ, ಧಾರ್ಮಿಕವಾಗಿಯೂ ಕೂಡ ಮಾಡಿದ್ದಾರೆ. ಆದ್ದರಿಂದ, ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕೊಡಲಿ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಪ್ರಾರ್ಥನೆಯನ್ನು ಮಾಡುತ್ತೇನೆ.

**ಶ್ರೀ ಎಂ. ನಾಗರಾಜು(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾಧಗಳು. ಇವತ್ತಿನ ದಿವಸ ಡಾ॥ ಭೀಮಣ್ಣ ಖಂಡ್ರೆಯವರ ನಿಧನದ ಸುದ್ದಿಯನ್ನು ತಿಳಿದ ನಾವೆಲ್ಲರೂ ಸಹಿತ ದುಃಖಿತರಾಗಿದ್ದೇವೆ. ಜೊತೆಗೆ ಸದನವೂ ಕೂಡ ಈ ಬಗ್ಗೆ ಅವರ ವಿಚಾರಧಾರೆಗಳ ಬಗ್ಗೆ ಗುಣಗಾನ

ಮಾಡಲಿಕ್ಕೆ ಪ್ರಯತ್ನ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಸಂತಾಪ ಸೂಚನೆಯನ್ನು ತಾವು ಏನು ತಂದಿದ್ದೀರಿ, ಅದಕ್ಕೆ ನಾನು ಸ್ವಾಗತ ಬಯಸುತ್ತೇನೆ ಮತ್ತು ಬೆಂಬಲವನ್ನು ಸೂಚಿಸುತ್ತೇನೆ.

ಮಾನ್ಯ ಡಾ॥ಭೀಮಣ್ಣ ಖಂಡ್ರೆಯವರು ಸರಳ ಸಜ್ಜನಿಕೆಯ ಮತ್ತು ನೇರ ನಡೆ ನುಡಿಗೆ ಹೆಸರಾಗಿರುವಂತಹ ಒಬ್ಬ ಧೀಮಂತ ನಾಯಕನಾಗಿ ಸುಮಾರು 60 ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ಅವರದ್ದೇ ಆದಂತಹ ರೀತಿಯಲ್ಲಿ ಛಾಪು ಮೂಡಿಸಿ ಹೋಗಿರುವಂತಹ ಒಬ್ಬ ಮಹಾನ್ ನಾಯಕ ಎಂದು ಹೇಳಿದರೆ ತಪ್ಪಾಗಲಾರದು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಕರ್ನಾಟಕದ ಗಡಿ ಭಾಗದಲ್ಲಿ ಕನ್ನಡದ ಬಗ್ಗೆ ಧ್ವನಿ ಎತ್ತಿದಂತಹ ಮೇಧಾವಿ, ಮತ್ತು ಆ ಒಂದು ಶ್ರೇಯಸ್ಸಿಗೆ ಪಾತ್ರರಾಗಿದ್ದವರು ಡಾ॥ ಭೀಮಣ್ಣ ಖಂಡ್ರೆ ರವರು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಕನ್ನಡವನ್ನು ಮಾತನಾಡುವಂತೆ ಬೆಂಗಳೂರಿನಲ್ಲೋ ಮತ್ತು ಬೇರೆ ಬೇರೆ ಭಾಗದಲ್ಲಿ ಹೇಳುವುದು ಸುಲಭ. ಗಡಿ ಭಾಗದಲ್ಲಿ ಅಂದರೆ ಬೆಳಗಾವಿಯಲ್ಲಿ ಆಗಿರಬಹುದು, ಬೀದರ್‌ನಲ್ಲಿ ಆಗಿರಬಹುದು, ಇಂತಹ ಜಾಗಗಳಲ್ಲಿ ಕನ್ನಡದ ಕಂಪನ್ನು ಬೆಳಗಿಸಲಿಕ್ಕೆ ಪ್ರಯತ್ನ ಮಾಡುವಂತಹದ್ದು, ನಿಜವಾಗಿಯೂ ಸಹ ಅವರು ಮಾಡಿರುವಂತಹ ಸೇವೆಯನ್ನು ನಾಡ ಸೇವೆ ಎಂದು ಹೇಳಲಿಕ್ಕಾಗುತ್ತದೆ. ಅದೇ ರೀತಿ ಕನ್ನಡದ ಏಕೀಕರಣದ ವಿಚಾರದಲ್ಲಿ ತನ್ನನ್ನು ತಾನೇ ತೊಡಗಿಸಿಕೊಂಡಂತಹ ಒಬ್ಬ ಮೇಧಾವಿ ನಾಯಕರಾಗಿ ಕೆಲಸ ಮಾಡಿದ್ದಾರೆ. ರಾಜಕಾರಣದಲ್ಲೂ ಈಗತಾನೆ ಮಾನ್ಯ ಶ್ರೀ ಅಡಗೂರ ಹೆಚ್. ವಿಶ್ವನಾಥ್ ರವರು ಮತ್ತು ಮಾನ್ಯ ಶ್ರೀ ಬಿ.ಕೆ. ಹರಿಪ್ರಸಾದ್‌ರವರು ಹೇಳಿದಂತೆ ಅವರು ಇದ್ದುದನ್ನು ಇದ್ದ ಹಾಗೆ ನೇರವಾಗಿ ಹೇಳುವಂತಹದ್ದರ ಬಗ್ಗೆ ಪರಿಪಾಠವನ್ನು ಬೆಳಸಿಕೊಂಡು ಬಂದಂತಹವರು ಮತ್ತು ಸತ್ಯವನ್ನು ಪ್ರತಿಪಾದನೆ ಮಾಡಬೇಕೆಂದಾಗ ಡಾ॥ ಭೀಮಣ್ಣ ಖಂಡ್ರೆಯವರು ಯಾರಿಗೂ ಸಹ ಮುಲಾಜು ಕೊಡದ ರೀತಿಯಲ್ಲಿ ಕೆಲಸ ಮಾಡಿದಂತಹ ವ್ಯಕ್ತಿ ಯಾರಾದರೂ ಇದ್ದಲ್ಲಿ ಅವರು ಡಾ॥ ಭೀಮಣ್ಣ ಖಂಡ್ರೆಯವರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಕಾಂಗ್ರೆಸ್ ಪಕ್ಷಕ್ಕೆ ಅವರದ್ದೇ ಆದಂತಹ ರೀತಿಯಲ್ಲಿ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವಂತಹವರು ಮತ್ತು ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಇತರ ನಮ್ಮ ರಾಷ್ಟ್ರೀಯ ನಾಯಕರುಗಳ ಬಗ್ಗೆ ಅಪಾರ ನಂಬಿಕೆಯನ್ನಿಟ್ಟುಕೊಂಡು ಕೆಲಸ ಮಾಡಿದಂತಹ ಒಬ್ಬ ಧೀಮಂತ ನಾಯಕರಾಗಿದ್ದರು. ಅವರು ರಾಜಕಾರಣಿ ಮಾತ್ರವಲ್ಲದೇ ವಕೀಲರಾಗಿಯೂ ಸಹ ಕೆಲಸ ಮಾಡಿ ಹಲವಾರು ಜನರಿಗೆ ಸೇವೆಯನ್ನು ಮಾಡಿರುವಂತಹದ್ದನ್ನು ನಾವು ಸ್ಮರಿಸಬಹುದಾಗಿದೆ. ಅದು ಶಿಕ್ಷಣ ಕ್ಷೇತ್ರದಲ್ಲಿ ಇರಬಹುದು, ಇಂಜಿನೀಯರಿಂಗ್ ಕಾಲೇಜುಗಳನ್ನು ಸ್ಥಾಪನೆ ಮಾಡುವುದು ಇರಬಹುದು, ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವಂತಹ ವಿಚಾರದಲ್ಲಿ ಅಪಾರ ನಂಬಿಕೆಯನ್ನು ಇಟ್ಟುಕೊಂಡಿದ್ದಂತಹ ಧೀಮಂತ ವ್ಯಕ್ತಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರವಾದಂತಹ ಕೆಲಸ ಮಾಡಿರುವಂತಹ ಇವರನ್ನು ನಾವುಗಳು ಸ್ಮರಿಸಬೇಕಾಗಿರುವುದು ನಮ್ಮ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಸಹಕಾರ ಕ್ಷೇತ್ರದಲ್ಲಿಯೂ ಸಹ ಅವರು ಉತ್ತಮವಾದ ಸೇವೆಯಯನ್ನು ಮಾಡಿರುತ್ತಾರೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ನಂಬಿಕೆಯನ್ನು ಇಟ್ಟುಕೊಂಡವರಾದ ಅವರು ಅಂದು ಹಾವನೂರು ರವರ ವಿಚಾರದಲ್ಲಿ

ವಿರೋಧ ಮಾಡಿದರೂ ಕೂಡ ಬಡ–ಬಗ್ಗರು ಬಂದಾಗ ಅವರ ಪರವಾಗಿ ನಿಲ್ಲತಕ್ಕಂತಹ ನೇರ ನುಡಿಯ ರಾಜಕಾರಣಿ ಯಾರಾದರೂ ಇದ್ದರೆ ಅವರು ಡಾ॥ ಭೀಮಣ್ಣ ಖಂಡ್ರೆ ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅವರು ಸಾರಿಗೆ ಸಚಿವರಾಗಿಯೂ ಕೂಡ ಉತ್ತಮವಾದ ಕೆಲಸ ಮಾಡಿರುತ್ತಾರೆ. ಸಾರಿಗೆ ವಿಚಾರದಲ್ಲಿ ಅದು ಗಡಿ ಭಾಗದಲ್ಲಿ ಇರಬಹುದು ಅಥವಾ ಉತ್ತರ ಕರ್ನಾಟಕ ಇರಬಹುದು, ಅಥವಾ ಕಲ್ಯಾಣ ಕರ್ನಾಟಕ ಇರಬಹುದು, ಈ ರೀತಿಯಲ್ಲಿ ಎಲ್ಲಾ ಭಾಗಗಳಲ್ಲಿಯೂ ಕೂಡ ಹಳ್ಳಿಗಳಿಗೆ ಬಸ್‌ಗಳನ್ನು ಕೊಡತಕ್ಕಂತಹ ಒಂದು ಕಟಿಬದ್ಧವಾದಂತಹ ಕೆಲಸವನ್ನು ಮಾಡತಕ್ಕಂತಹ ವಿಚಾರದಲ್ಲಿ ಮತ್ತು ಬೆಂಗಳೂರು ನಗರ ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲಿಕ್ಕೆ ಅವರದ್ದೇ ಆದಂತಹ ಕೊಡುಗೆಯನ್ನು ಕೊಟ್ಟಿರುವುದನ್ನು ನಾವು ಮರೆಯಬಾರದು ಎನ್ನುವ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಅವರಿಗೆ ಅರ್ಥವಾಗಿದ್ದು ಏನೆಂದರೆ, ಸಾರ್ವಜನಿಕ ಸಾರಿಗೆ ಎನ್ನುವುದನ್ನು ಒಂದು ಜೀವನಾಡಿಯಾಗಿ ಪರಿವರ್ತನೆಗೊಳಿಸಬೇಕಾಗುತ್ತದೆ. ಅದು ಹಳ್ಳಿಗಾಡಿನಿಂದ ಹಿಡಿದು, ಬೆಂಗಳೂರು ನಗರದವರೆಗೂ ಸಂಪರ್ಕ ವ್ಯವಸ್ಥೆ ಸರಿಯಾಗಿ ಇರಬೇಕೆನ್ನುವ ವಿಚಾರದಲ್ಲಿ ಮತ್ತು ಕೈಗೆಟುಕುವ ದರದಲ್ಲಿ ಸಾರಿಗೆ ವ್ಯವಸ್ಥೆ ಇರಬೇಕೆನ್ನುವುದರಲ್ಲಿ ನಂಬಿಕೆ ಇಟ್ಟುಕೊಂಡಿದ್ದವರಾಗಿದ್ದರು. ಆದರೆ, ಅಲ್ಲಿ ಆಗುತ್ತಿದ್ದಂತಹ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುತ್ತಿದ್ದ ವ್ಯಕ್ತಿ ಯಾರಾದರೂ ಇದ್ದರೆ, ಅವರು ಡಾ॥ ಭೀಮಣ್ಣ ಖಂಡ್ರೆ ಸಾಹೇಬರು ಎನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಈ ಎಲ್ಲಾ ವಿಚಾರಗಳನ್ನು ಒಳಗೊಂಡಂತೆ ಅವರ ಕುಟುಂಬದವರಿಗೆ ಮತ್ತು ಅವರ ಆತ್ಮೀಯರಿಗೆಲ್ಲರಿಗೂ ಕೂಡ ಬಹಳ ದುಃಖ ಆಗಿರುವಂತಹ ಸಂದರ್ಭದಲ್ಲಿ ಅವರುಗಳಿಗೆ ಧೈರ್ಯ ತುಂಬುವಂತಹ ಶಕ್ತಿಯನ್ನು ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತಾ, ಆ ಧೀಮಂತ ನಾಯಕನಿಗೆ ಸಂತಾಪವನ್ನು ವ್ಯಕ್ತ ಮಾಡಲಿಕ್ಕೆ ನನಗೆ ಅವಕಾಶ ಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಡಾ॥ ಭೀಮಣ್ಣ ಖಂಡ್ರೆಯವರ ನಿಧನದ ಸಂತಾಪ ಸೂಚನೆಯಲ್ಲಿ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟ ತಮಗೆ ಧನ್ಯವಾದಗಳು. ಬೀದರ್ ಜಿಲ್ಲೆಯ ಹಿರಿಯ ರಾಜಕಾರಣಿಯಾದ ಅವರು ಮಾಜಿ ಸಚಿವರು, ಗಡಿನಾಡಿನ ಹುಲಿ ಎಂದು ಖ್ಯಾತಿವುಳ್ಳವರಾಗಿದ್ದ ಡಾ॥ ಭೀಮಣ್ಣ ಖಂಡ್ರೆಯವರ ಅಗಲಿಕೆಯಿಂದ ರಾಜ್ಯವು ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಿದೆ ಎನ್ನುವ ಅಭಿಪ್ರಾಯದೊಂದಿಗೆ ಅವರ ನಿಧನಕ್ಕೆ ಈ ಸದನದ ಪರವಾಗಿ ನಾವು ತೀವ್ರವಾದ ಸಂತಾಪವನ್ನು ವ್ಯಕ್ತ ಪಡಿಸುತ್ತೇನೆ. ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಸಾರಿಗೆ ಮಂತ್ರಿಯಾದ ಕೂಡಲೇ ಕೂಡಲ ಸಂಗಮಕ್ಕೆ ಬಸ್ಸಿನ ವ್ಯವಸ್ಥೆ ಇರಲಿಲ್ಲ. ಬಸವಣ್ಣನವರ ಆ ಕ್ಷೇತ್ರಕ್ಕೆ ಹೋಗಿ ಬರಲು ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಮರುದಿನವೇ ಕೂಡಲ ಸಂಗಮಕ್ಕೆ ಬಸ್ಸಿನ ಸೌಕರ್ಯವನ್ನು ಕೊಟ್ಟಂತಹವರು ಯಾರಾದರೂ ಕರ್ನಾಟಕ ರಾಜ್ಯದಲ್ಲಿ ಇದ್ದಾರೆಂದರೆ, ಆ ಒಂದು ಕೆಲಸವನ್ನು ಮೊಟ್ಟ ಮೊದಲಿಗೆ ಮಾಡಿದವರು ಎಂದರೆ ಅವರೇ ಡಾ॥ ಭೀಮಣ್ಣ ಖಂಡ್ರೆಯವರು. ಅವರು

ಅಂತಹ ಒಬ್ಬ ಮೇದಾವಿ ನಾಯಕರಾಗಿದ್ದವರು. ಅವರ ಅಗಲಿಕೆಯಿಂದ ನಮ್ಮ ಕಲ್ಯಾಣ ಕರ್ನಾಟಕ ಭಾಗಕ್ಕೆ ಅಪಾರ ನಷ್ಟವಾಗಿದೆ. ಬಾಲ್ಕಿ ಎನ್ನುವಂತಹ ಒಂದು ಸಣ್ಣ ತಾಲ್ಲೂಕಿನಲ್ಲಿ ಇಂಜಿನೀಯರಿಂಗ್ ಕಾಲೇಜನ್ನು ಸ್ಥಾಪಿಸಿ, ಸಾವಿರಾರು ಮಕ್ಕಳಿಗೆ, ಬಡ ವಿದ್ಯಾರ್ಥಿಗಳಿಗೆ ಕೆಲವು ಸಂದರ್ಭದಲ್ಲಿ ಪುಕ್ಕಟ್ಟೆಯಾಗಿ ವಿದ್ಯಾಭ್ಯಾಸವನ್ನು ಕೊಡಿಸುವಂತಹ ನಿರ್ಣಯವನ್ನು ತೆಗೆದುಕೊಳ್ಳುವಂತಹ ಕೆಲಸವನ್ನು ಅವರು ಮಾಡಿದ್ದರಿಂದ ಆ ಭಾಗದಲ್ಲಿ ಬಹಳಷ್ಟು ಮಂದಿ ವಿದ್ಯಾರ್ಥಿಗಳು ಇಂಜಿನೀಯರಿಂಗ್ ಪದವಿಯನ್ನು ಪಡೆಯುವಂತಹ ಅವಕಾಶವನ್ನು ಡಾ॥ ಭೀಮಣ್ಣ ಖಂಡ್ರೆಯವರು ಮಾಡಿಕೊಟ್ಟಿದ್ದಾರೆ. ದೀರ್ಘಕಾಲ ರಾಜಕೀಯದಲ್ಲಿದ್ದರೂ ಸಹ ಅವರು ಪಾಲಿಸಿಕೊಂಡು ಬಂದಂತಹ ಸರಳತೆ, ನೇರ ನುಡಿ ಮತ್ತು ಹಿರಿಯ ಮತ್ತು ಕಿರಿಯರು ಎನ್ನದೇ ಎಲ್ಲರನ್ನೂ ಸರಿಸಮನಾಗಿ ಪ್ರೀತಿಯಿಂದ ನಡೆಸಿಕೊಳ್ಳುತ್ತಿದ್ದ ಅವರು ಎಲ್ಲರಿಗೂ ಮಾದರಿಯಾಗಿದ್ದರು. ಅವರು ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕನ್ನಡ ಭಾಷೆ, ನೆಲ ಮತ್ತು ಜಲದ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಅವರು ತೋರಿದ ಶಕ್ತಿ, ಧೈರ್ಯ ಮತ್ತು ಕಾಳಜಿಯಿಂದಾಗಿ ಅವರು ಗಡಿನಾಡಿನ ಹುಲಿಯೆಂದೇ ಖ್ಯಾತರಾಗಿದ್ದರು. ಅವರು ನನಗೆ ತಿಳಿದ ಮಟ್ಟಿಗೆ ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷರಾದ ಅವರ ನಂತರ ಅದರ ಅಧ್ಯಕ್ಷರಾಗಿದ್ದ ಶ್ರೀಮಾನ್ ಶಾಮನೂರು ಶಿವಶಂಕರಪ್ಪನವರು ಸಹ ಇತ್ತೀಚೆಗೆ ತೀರಿಕೊಂಡರು. ಬಹುಶಃ ಶಾಮನೂರು ಶಿವಶಂಕರಪ್ಪನವರು ಡಾ॥ ಭೀಮಣ್ಣ ಖಂಡ್ರೆಯವರು ಮತ್ತು ಶ್ರೀಮಾನ್ ತಿಪ್ಪಣ್ಣನವರು ಈ ಒಂದು ಸಮಾಜಕ್ಕೆ ತಳಪಾಯವನ್ನು ಹಾಕಿಕೊಟ್ಟವರಾಗಿದ್ದಾರೆ. ಈ ವೀರಶೈವ ಧರ್ಮ ಸ್ಥಾಪನೆ ಮಾಡಿ, ಇದಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬಿ, ಅದೇ ಜನಾಂಗದಲ್ಲಿ ಬಹಳಷ್ಟು ಮಂದಿ ರಾಜಕೀಯದಲ್ಲಿ ಪ್ರವೇಶ ಮಾಡತಕ್ಕಂತಹದ್ದು, ಶಾಸಕರಾಗುವಂತಹದ್ದು, ಮಂತ್ರಿಗಳಾಗುವಂತಹದ್ದು, ಹಾಗೂ ಇನ್ನಿತರ ಹೆಚ್ಚಿನ ಸ್ಥಾನಮಾನನ್ನು ಕೊಟ್ಟು ಕರ್ನಾಟಕ ರಾಜ್ಯದಲ್ಲಿ ಈ ಲಿಂಗಾಯಿತ ವೀರಶೈವ ಧರ್ಮಕ್ಕೆ ಹೆಚ್ಚಿನ ಶಕ್ತಿಯನ್ನು ಕೊಟ್ಟಂತವರು ಮತ್ತು ಅದರ ನೇತೃತ್ವ ವಹಿಸಿದವರು ಯಾರಾದರೂ ಇದ್ದರೆ ಅವರು ಡಾ॥ ಭೀಮಣ್ಣ ಖಂಡ್ರೆಯವರು ಎಂದು ಹೇಳಲಿಕ್ಕೆ ಬಯಸುತ್ತೇನೆ. ಮತ್ತೆ ನಾರಂಜಾ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಆ ಭಾಗದ ರೈತರ ಋಣವನ್ನು ತೀರಿಸುವಂತಹ ಕೆಲಸವನ್ನು ಮಾಡಿದರು. ಮತ್ತೆ ಸಮಾಜದ ಸಂಘಟನೆಗಾಗಿ ಅವರು ಹತ್ತು–ಹಲವಾರು ಸೇವೆಗಳನ್ನು ಮಾಡಿದರು. ಡಾ॥ ಭೀಮಣ್ಣ ಖಂಡ್ರೆಯವರ ನಿಧನ ಕೇವಲ ಅವರ ಕುಟುಂಬಕ್ಕೆ ಮಾತ್ರವಲ್ಲದೆ, ಇಡೀ ಕಲ್ಯಾಣ ಕರ್ನಾಟಕ ಭಾಗಕ್ಕೆ ಮತ್ತು ರಾಜ್ಯಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರು ಶಿಕ್ಷಣ ಕ್ಷೇತ್ರದಲ್ಲಿಯೂ ಕೂಡ, ತಾವು ಶಿಕ್ಷಣ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಹುಬ್ಬಳ್ಳಿ–ಧಾರವಾಡ ಭಾಗದಲ್ಲಿ ತಾವು ಯಾವ ರೀತಿಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ಮಾಡಿದ್ದೀರಿ, ಅವರು ಅವರ ಭಾಗದಲ್ಲಿ ಮೊದಲೇ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಟ್ಟರು.

(ಮುಂದು)

(006) 22.01.2026 12.40 ಎಸ್‌ವಿ-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ಮುಂದು):-**

ಡಾ: ಹಾವನೂರ ವರದಿಯ ಪ್ರಕರಣದ ಕುರಿತು ಮಾನ್ಯ ಅಡಗೂರು ಹೆಚ್. ವಿಶ್ವನಾಥ್‌ರವರು ಹೇಳಿದರು. ಕಟ್ಟಕಡೆಯವರೆಗೆ ವೈರತ್ವ ಸಾಧಿಸುವಂತಹ ವ್ಯಕ್ತಿತ್ವ ಅವರಲ್ಲಿ ಇರಲಿಲ್ಲ. ಅವರು ಕರುಣಾಮಯಿ ಆಗಿದ್ದರು. ದಿವಂಗತ ದೇವರಾಜ ಅರಸು ಅವರಿಗೆ ಅಧಿಕಾರ ಹೋದನಂತರ ಅವರು ಬೀದರ್‌ಗೆ ಬಂದಾಗ ಅವರು ಬಂದ ಸುದ್ದಿ ತಿಳಿದ ಕೂಡಲೇ ಅವರಿಗೂ, ಇವರಿಗೂ ವೈಯಕ್ತಿಕ ವೈಮನಸ್ಯಗಳೇನೇ ಇದ್ದರೂ ಕೂಡ ಮಾನ್ಯ ಭೀಮಣ್ಣ ಖಂಡ್ರೆಯವರು ತಕ್ಷಣ ಕಾರು ತೆಗೆದುಕೊಂಡು ರೈಲ್ವೆ ಸ್ಟೇಷನ್‌ಗೆ ಹೋಗಿ, ಅವರನ್ನು ಕರೆದುಕೊಂಡು ಬಂದು ಅವರಿಗೆ ಎಲ್ಲಾ ಉಪಚಾರ ಮಾಡಿ ಅರಸು ಅವರು ಬಂದಿದ್ದಂಥ ಕೆಲಸವನ್ನು ಮಾಡಿಸಿಕೊಟ್ಟು, ಪುನಃ ವಾಪಸ್ ಅವರನ್ನು ರೈಲ್ವೆ ಸ್ಟೇಷನ್‌ನಲ್ಲಿ ಬಿಟ್ಟಾಗ ಮಾನ್ಯ ದೇವರಾಜ ಅರಸುರವರ ಕಣ್ಣಲ್ಲಿ ನೀರು ಬರುವಂತೆ ನಡೆದುಕೊಂಡವರು ದಿವಂಗತ ಭೀಮಣ್ಣ ಖಂಡ್ರೆಯವರು. ಅಂಥವರು ಬೇಕು. ಯಾವುದೇ ಸಮಾಜ ಬೆಳೆಯಬೇಕಾದರೆ, ಯಾವುದೇ ಸಮಾಜ ಗಟ್ಟಿಯಾಗಬೇಕಾದರೆ, ಯಾವುದೇ ಸಮಾಜಕ್ಕೆ ಎಲ್ಲಾ ರೀತಿಯ ರಾಜಕೀಯ ಪ್ರಾತಿನಿಧ್ಯ ಹಾಗೂ ಎಲ್ಲಾ ಸೌಲಭ್ಯಗಳು ಸಿಗಬೇಕಾದರೆ ದಿವಂಗತ ಭೀಮಣ್ಣ ಖಂಡ್ರೆಯಂಥವರು, ದಿವಂಗತ ಎನ್. ತಿಪ್ಪಣ್ಣನವರಂಥವರು, ದಿವಂಗತ ಶಾಮನೂರು ಶಿವಶಂಕರಪ್ಪನವರಂಥವರು ಎಲ್ಲಾ ಸಮಾಜಗಳಲ್ಲಿ ಬೆಳೆಯಬೇಕು. ಆಯಾ ಸಮಾಜಗಳ ಹಿರಿಯರು ಮಾರ್ಗದರ್ಶನ ಮಾಡಿ ಬೆನ್ನೆಲುಬಾಗಿದ್ದಾಗ ಮಾತ್ರ ಎಲ್ಲಾ ಸಮಾಜಗಳು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳಿ, ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ಆ ಭಾಗದವರಿಗೆ ಅವರು ಸ್ಫೂರ್ತಿಯಾಗಬೇಕು. ಅವರು ಹಾಕಿಕೊಟ್ಟ ಮಾರ್ಗದರ್ಶನ, ವಿಚಾರಧಾರೆಯನ್ನು ನಾವೆಲ್ಲರೂ ಅಳವಡಿಸಿಕೊಂಡು ಹೋಗುವುದಕ್ಕೆ ಅವಕಾಶವಿದೆ. ಆ ಕುಟುಂಬವರ್ಗದವರಿಗೆ, ಅವರ ಅಭಿಮಾನಿಗಳಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ಈ ಸದನದ ಮೂಲಕ ಪ್ರಾರ್ಥಿಸುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ಏಕೀಕರಣದ ರೂವಾರಿ, ಸ್ವಾತಂತ್ರ್ಯ ಸೇನಾನಿ, ಜೆ.ಪಿ. ವಿಚಾರಧಾರೆಗಳಿಂದ ಪ್ರಭಾವಿತರಾಗಿದ್ದ ಹಿರಿಯ ರಾಜಕಾರಣಿ, ವೀರಶೈವ ಮಹಾಸಭಾದ ಧುರೀಣರು, ಮೇರು ವ್ಯಕ್ತಿತ್ವದ ಮುತ್ಸದ್ದಿ, ಬರದ ನಾಡಿನ ಭಗೀರಥ, ಅನುಭವ ಮಂಟಪದ ರೂವಾರಿ, ಕರುನಾಡಿನ ಲೋಕನಾಯಕ ಎಂದು ಪ್ರಸಿದ್ಧಿ ಪಡೆದಿರುವಂಥ ಶ್ರೀ ಭೀಮಣ್ಣ ಖಂಡ್ರೆಯವರ ನಿಧನ ವಾರ್ತೆ ಎಲ್ಲರೂ ದುಃಖ ಪಡುವಂತಾಯಿತು. ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಶಾಸಕರಾಗಿ, ವಕೀಲರಾಗಿ, ಸಚಿವರಾಗಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಸುಮಾರು 60 ವರ್ಷಗಳ ಕಾಲ ರಾಜಕೀಯ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳ ಕೆಲಸಗಳಲ್ಲಿ ತೊಡಗಿಸಿಕೊಂಡು ಗಡಿಜಿಲ್ಲೆಯಾದ ಬೀದರ್‌ನ ಅಭಿವೃದ್ಧಿಗೆ ತಮ್ಮನ್ನು ತಾವು ಮುಡುಪಾಗಿಸಿಕೊಂಡಿದ್ದರು. ನೆನೆಗುದಿಗೆ ಬಿದ್ದಿದ್ದ ಬೀದರ್ ಸಕ್ಕರೆ

ಕಾರ್ಖಾನೆ, ಮಹಾತ್ಮಾ ಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಗಳನ್ನು ಆರಂಭಿಸಿ, ರೈತರ ನೆರವಿಗೆ ಧಾವಿಸಿದಂಥ ಸರಳ, ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಪುರಸಭೆಯ ಸದಸ್ಯರಿಂದ ಹಿಡಿದು ಮಂತ್ರಿ ಆಗುವವರೆಗೆ ತಮ್ಮ ರಾಜಕೀಯ ನಡೆಯನ್ನು ನಡೆಸಿಕೊಂಡು ಬಂದವರು. ಬೀದರ್ ಜಿಲ್ಲೆಯ ಅರ್ಧದಷ್ಟು ಜನರ ನೀರಿನ ಸಮಸ್ಯೆಗೆ ಮುಕ್ತಿ ಕೊಟ್ಟ ಬರನಾಡಿನ ಭಗೀರಥ ಎಂದೇ ಪ್ರಖ್ಯಾತಿಯನ್ನು ಪಡೆದರು. ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಶೈಕ್ಷಣಿಕ ಕ್ರಾಂತಿಗೆ ನಾಂದಿ ಹಾಡಿದವರು. ಅಪ್ಪಟ ಬಸವ ತತ್ವದ ಅನುಯಾಯಿಯಾಗಿದ್ದರು. ಸರ್ವ ಧರ್ಮವನ್ನು ಪ್ರೀತಿಸುವಂಥ ವ್ಯಕ್ತಿತ್ವವನ್ನು ಹೊಂದಿದ್ದರು. ಶತಾಯುಷಿಗಳು ಇವತ್ತು ನಮ್ಮನ್ನು ಅಗಲಿರುವುದು ಅತ್ಯಂತ ದುಃಖದ ಸಂಗತಿ. ಅವರು ತೋರಿಸಿರುವ ಸನ್ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣವೆಂದು ಆಶಿಸಿ, ತಾವು ಸೂಚಿಸಿರುವ ಸಂತಾಪಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಮತ್ತು ಅವರ ಅಗಲಿಕೆಯ ನೋವನ್ನು ಭರಿಸುವಂಥ ಶಕ್ತಿಯನ್ನು ಅವರ ಕುಟುಂಬದವರಿಗೆ ದೇವರು ನೀಡಲಿ ಎಂದು ಪ್ರಾರ್ಥಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಡಾ: ಭೀಮಣ್ಣ ಖಂಡ್ರೆಯವರ ನಿಧನದಿಂದ ಇಡೀ ಕಲ್ಯಾಣ ಕರ್ನಾಟಕಕ್ಕೆ ದುಃಖವಾಗಿದೆ. ಏಕೆಂದರೆ ಅವರು ಶಿಕ್ಷಣ ಪ್ರೇಮಿಯಾಗಿ ಇಡೀ ನಮ್ಮ ಕಲ್ಯಾಣ ಕರ್ನಾಟಕದಲ್ಲಿ ಯಾವುದಾದರೊಂದು ಇಂಜಿನಿಯರಿಂಗ್ ಕಾಲೇಜು ತರಬೇಕೆನ್ನುವ ಕೆಲಸವನ್ನು ಡಾ:ಭೀಮಣ್ಣ ಖಂಡ್ರೆಯವರು ಮಾಡಿದ್ದಾರೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳಾಗಿರುವ ಗಾಂಧಿ ಸಕ್ಕರೆ ಕಾರ್ಖಾನೆಯಿರಬಹುದು ಅಥವಾ ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ (ಬಿ.ಎಸ್.ಎಸ್.ಕೆ. ಲಿಮಿಟೆಡ್) ಇರಬಹುದು ಮತ್ತು ಶಾಂತಿನಿ ವಿದ್ಯಾನಿಕೇತನ ಎನ್ನುವ ಶಾಲೆಯನ್ನು ಬೀದರ್‌ನಲ್ಲಿ ಮೊಟ್ಟಮೊದಲನೆಯದಾಗಿ ತಂದಿದ್ದು ಡಾ: ಭೀಮಣ್ಣ ಖಂಡ್ರೆಯವರು. ಅದೇ ರೀತಿಯಾಗಿ ಅವರು 4 ಬಾರಿ ಎಂ.ಎಲ್.ಎ., 2 ಬಾರಿ ಎಂ.ಎಲ್.ಸಿ. ಆಗಿದ್ದರು. ಒಂದು ಬಾರಿ ಸಾರಿಗೆ ಸಚಿವರಾಗಿದ್ದರು. ಈಗಾಗಲೇ ಮಾನ್ಯ ತಿಪ್ಪಣ್ಣಪ್ಪ ಅವರು ಮಾತನಾಡುತ್ತಾ ಹೇಳಿದರು. ಮೊಟ್ಟಮೊದಲನೆಯದಾಗಿ ಕೂಡಲ ಸಂಗಮಕ್ಕೆ ಬಸ್ ವ್ಯವಸ್ಥೆಯನ್ನು ಮಾಡಿದವರು ಡಾ: ಭೀಮಣ್ಣ ಖಂಡ್ರೆಯವರು. ತಾವು ಸೂಚಿಸಿರುವ ಸಂತಾಪವನ್ನು ಬೆಂಬಲಿಸಿ, ಇಡೀ ಕಲ್ಯಾಣ ಕರ್ನಾಟಕ ಭಾಗದಿಂದ ನಾನು ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಮನೆಯವರೆಲ್ಲರಿಗೂ ಭಗವಂತನು ಧೈರ್ಯವನ್ನು ಕೊಡಲಿ ಎಂದು ವೀರಭದ್ರ ದೇವರಲ್ಲಿ ಪ್ರಾರ್ಥಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಶತಾಯುಷಿ ಡಾ: ಭೀಮಣ್ಣ ಖಂಡ್ರೆಯವರ ನಿಧನ ರಾಜ್ಯ ರಾಜಕಾರಣದಲ್ಲಿ ತುಂಬಲಾರದ ಒಂದು ನಷ್ಟವೆಂದು ನಾನು ಭಾವಿಸುತ್ತೇನೆ. ದಿವಂಗತ ಭೀಮಣ್ಣ ಖಂಡ್ರೆಯವರು ನೇರ ನುಡಿಯವರು ಹೌದು. ಅಷ್ಟೇ ನೇರ ನಡೆಯವರೂ ಕೂಡ. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಏಕೀಕರಣದ

ಸಂದರ್ಭದಲ್ಲಿಯೂ ಕೂಡ ಅವರು ಹೋರಾಟಗಾರರಾಗಿದ್ದರು. ರಾಜ್ಯ ರಾಜಕಾರಣಕ್ಕೆ ಹಲವು ರೀತಿಯಲ್ಲಿ ಅವರು ಸೇವೆಯನ್ನು ಸಲ್ಲಿಸಿರುವಂಥವರು.

ಮಾನ್ಯ ಸಭಾಪತಿಯವರೆ, ಅವರು ವೀರಪ್ಪ ಮೊಯಿಲಿಯವರ ಕಾಲದಲ್ಲಿ ಸಾರಿಗೆ ಸಚಿವರಾಗಿದ್ದರು. ಮುಂಚೆ ವಿಧಾನಸೌಧಕ್ಕೆ ಮತ್ತು ಶಾಸಕರ ಭವನಕ್ಕೆ ಬೇಲಿಯಿರಲಿಲ್ಲ. ಕೆಲವು ಬಾರಿ ಅವರು ವಾಕಿಂಗ್ ಮಾಡಬೇಕೆಂದು ಬಂದಾಗ ಯುವಕರಾದ ನಾವು ಅವರ ಹಿಂದೆ ಬರುತ್ತಿದ್ದೆವು. ಅವರ ಜೊತೆಯಲ್ಲಿ ಮಾತನಾಡಿಕೊಂಡು ನಡಿಗೆಯನ್ನು ಮುಂದುವರೆಸೋಣವೆಂದು ಹೋದರೆ ಅವರೇನು ಮಾತನಾಡುತ್ತಿದ್ದರೆನ್ನುವುದು ನಮಗೆ ಅರ್ಥವಾಗುತ್ತಿರಲಿಲ್ಲ. ಅಷ್ಟು ವೇಗವಾಗಿ ಅವರು ಮಾತನಾಡುತ್ತಿದ್ದರು. ಅವರ ಭಾಷೆಯು ಉರ್ದುಮಿಶ್ರಿತವಾಗಿತ್ತು. ನಮಗೆ ಅರ್ಥವಾಗುತ್ತಿರಲಿಲ್ಲ. ಆದರೆ ಗುಲ್ಬರ್ಗಾ ಅಥವಾ ಬೀದರ್ ಭಾಗದ ಕೆಲವು ಸ್ನೇಹಿತರು ನಮ್ಮ ಜೊತೆಯಲ್ಲಿರುತ್ತಿದ್ದರು. ಅವರು ಮಾತನಾಡಿದ ನಂತರ ಅವರೇನು ಮಾತನಾಡಿದರೆಂದು ಸ್ನೇಹಿತರ ಬಳಿ ಕೇಳಿ ತಿಳಿದುಕೊಳ್ಳುತ್ತಿದ್ದೆವು. ಅವರು ನಡೆಯುವಾಗ ಅವರ ಜೊತೆ ನಾವು ನಡೆಯುವುದಕ್ಕಾಗುತ್ತಿರಲಿಲ್ಲ. ಅವರು ನಡೆಯುತ್ತಿದ್ದರೆ ನಾವು ಹಿಂದಿನಿಂದ ಓಡಬೇಕಿತ್ತು. ಅವರ ನಡಿಗೆ ಅಷ್ಟು ವೇಗವಾಗಿತ್ತು.

ಕಾಂಗ್ರೆಸ್ ಪಕ್ಷದ ಸಂವಿಧಾನದಲ್ಲಿ ಕಾಂಗ್ರೆಸ್ ಸದಸ್ಯರಾಗುವವರು ಪಕ್ಕಾ ಖಾದಿಧಾರಿಗಳಾಗಿರಬೇಕು ಎಂದು ಇದೆ. ಇತ್ತೀಚೆಗೆ ಅದು ಸ್ವಲ್ಪ ಕಡಿಮೆಯಾಗಿದೆ. ಅದು ಬೇರೆ ವಿಷಯ. ಆದರೆ ಭೀಮಣ್ಣ ಖಂಡ್ರೆಯವರು ನೂರಕ್ಕೆ ನೂರರಷ್ಟು ಖಾದಿಧಾರಿ. ಮಿಗಿಲಾಗಿ ಅವರಿಗೆ ರೇಷ್ಮೆಯ ಸೂಟ್ ಆಗಬೇಕಿತ್ತು. ಅದೂ ಖಾದಿ ರೇಷ್ಮೆಯೇ ಆಗಿರಬೇಕು. ಅವರು ರೇಷ್ಮೆಯ ಸೂಟ್ ಹಾಕಿಕೊಂಡು ಬಹಳ ಠಾಕು-ಠೀಕಾಗಿರುತ್ತಿದ್ದರು. ಅಷ್ಟೇ aggressive ಆಗಿರುತ್ತಿತ್ತು ಅವರ ಮಾತುಗಳು, ನಡೆ-ನುಡಿಗಳು. ಒಂದು ಘಟನೆಯನ್ನು ತಮ್ಮ ಮೂಲಕ ನಾನು ಸದನದ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದರು. ಒಂದು ಸಮಾರಂಭ ನಡೆಯುತ್ತಿತ್ತು. ಆಗ ತಾನೇ ಈ ಫ್ಲೆಕ್ಸ್ ಸಂಸ್ಕೃತಿ ಬಂದಿತ್ತು. ಮೊದಲೆಲ್ಲಾ ಬ್ಯಾನರ್ ಮಾಡಬೇಕಾದರೆ ಅಥವಾ ಚಿತ್ರ ಬಿಡಿಸಬೇಕಾದರೆ ಬಣ್ಣದಲ್ಲಿ ಮಾಡಬೇಕಿತ್ತು. ಆದರೆ ಫ್ಲೆಕ್ಸ್ ಬಂದಾಗ ಕೆಲವರ ಫೋಟೋಗಳು ಸರಿಯಾಗಿ ಸಿಗುತ್ತಿರಲಿಲ್ಲ. ಸಣ್ಣ ಫೋಟೋಗಳು ಸಿಗುತ್ತಿದ್ದವು. ಅವರು ನಿಂತಿರುವಂಥ ಫೋಟೊಗಳು ಸಿಗುತ್ತಿರಲಿಲ್ಲ. ಒಂದು ಕಾರ್ಯಕ್ರಮಕ್ಕೆ ಮಾನ್ಯ ಎಸ್.ಎಂ.ಕೃಷ್ಣ ಅವರು ಬರುತ್ತಾರೆ. ಕೆಲವರ ಸರಿಯಾದ ಫೋಟೋಗಳು ಸಿಕ್ಕಿರಲಿಲ್ಲ. ಭೀಮಣ್ಣ ಖಂಡ್ರೆಯವರ ಸೂಟ್ ಹಾಕಿಕೊಳ್ಳುತ್ತಿದ್ದ ಫೋಟೋ ಸಿಗುತ್ತಿತ್ತು. ಫ್ಲೆಕ್ಸ್ ಮಾಡುವವನಿಗೆ ದಿವಂಗತ ಎ.ಕೃಷ್ಣಪ್ಪನವರ ಫೋಟೋ ಮತ್ತು ಡಾ:ಜಿ.ಪರಮೇಶ್ವರ್ ಅವರ ಫೋಟೋ ಸಿಕ್ಕಿರಲಿಲ್ಲವೆಂದು ಕಾಣುತ್ತದೆ. ಭೀಮಣ್ಣ ಖಂಡ್ರೆಯವರ ದೇಹ, ತಲೆ ಮಾತ್ರ ಇಬ್ಬರದ್ದೂ ಬದಲು ಮಾಡಿಬಿಟ್ಟಿದ್ದರು. ಏಕೆಂದರೆ ಫೋಟೋ ಅಷ್ಟು ಚೆನ್ನಾಗಿತ್ತು. ಇದನ್ನೇನು ಮಾಡಿದ್ದಾರೆಂದರೆ ಪಕ್ಕ ಪಕ್ಕದಲ್ಲಿ ಹಾಕಿಬಿಟ್ಟಿದ್ದರು. ಮಾನ್ಯ ಎಸ್.ಎಂ.ಕೃಷ್ಣ ಅವರು ಬಂದು ಇದು ಯಾರು ಹೀಗೆ ನಿಂತಿದ್ದಾರೆ ಎಂದು ನೋಡಿದರು. ನೋಡಿದರೆ ಎ.ಕೃಷ್ಣಪ್ಪ. ಎ.ಕೃಷ್ಣಪ್ಪ ಅವರು

ಅಲ್ಲಿಯೇ ಎಲ್ಲೋ ಇದ್ದರು. ಇಲ್ಲಿ ಬಾ ಎಂದು ಅವರನ್ನು ಕರೆದರು. ಈ ಫೋಟೊ ಯಾವಾಗ ತೆಗೆಸಿದೆಯೆಂದು ಕೇಳಿದರು. ಸ್ವಾಮಿ, ಇದು ನನ್ನ ಫೋಟೋ ಎಂದು ನನಗೇ ಗೊತ್ತಿಲ್ಲ ಎಂದು ಅವರು ಹೇಳಿದರು. ಡಾ:ಜಿ.ಪರಮೇಶ್ವರ್ ಅವರನ್ನು ಕೇಳಿದರು. ಎರಡೂ ಪಕ್ಕ ಪಕ್ಕದಲ್ಲಿ ಹಾಕಿಬಿಟ್ಟಿದ್ದಾರೆ. ಆಮೇಲೆ ಸನ್ಮಾನ್ಯ ಎಸ್.ಎಂ.ಕೃಷ್ಣ ಅವರು "ಈ ಡ್ರೆಸ್ ಯಾರದ್ದು ಗೊತ್ತಾ?" ಎಂದು ಕೇಳಿದರು.

**(ಮುಂದು)**

(07) 22-01-2026, 12.50, ಕೆಜಿ.ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ಮುಂದು):-**

ಇವರಿಗೆ ಗೊತ್ತಿಲ್ಲ. ಇವರು ಹೇಳಲಿಲ್ಲ. ಇದು ಡಾ॥ ಭೀಮಣ್ಣ ಖಂಡ್ರೆಯವರದ್ದು, ಅದರಲ್ಲಿನ ತಲೆಗಳನ್ನು ತೆಗೆದು ನಿಮ್ಮ ತಲೆಗಳನ್ನು ಇಟ್ಟಿದ್ದಾರೆ. ಏಕೆಂದರೆ, ನಿಮಗೆ ಇಷ್ಟು ಚೆನ್ನಾಗಿ dress ಮಾಡುವುದಕ್ಕೆ ಬರುವುದಿಲ್ಲ. ಅದು ಖಾದಿ, ರೇಷ್ಮೆ ಸೂಟ್ ನೀವು ಹಾಕುತ್ತೀರಾ ಎಂದು ದಿವಂಗತ ಶ್ರೀ ಎಸ್.ಎಂ.ಕೃಷ್ಣನವರು ಅವರನ್ನೆಲ್ಲಾ ನಗಿಸಿ ಅವರ ಫೋಟೋಗೆ ಮಾಡಿ ಹೋದರು. ಅಂದರೆ, ಅವರು dress ಮಾಡಿದರೂ ಸಹ, ಅವರು ಅಷ್ಟೇ ಬಹಳ ಟೀಕು ಟಾಕಾಗಿ ಇರುತ್ತಿದ್ದರು. ಹಾಗೆಯೇ, ಅವರ ನಡೆ ನುಡಿಯು ಸಹ ಇರುತ್ತಿತ್ತು. ಅವರು ವೇಗವಾಗಿ ಮಾತನಾಡಬಹುದು ಅಷ್ಟೇ. ಆದರೆ, ಅವರು ಅಷ್ಟೇ ಒಳ್ಳೆಯ ವಿಚಾರಗಳನ್ನು ಸಮಾಜಕ್ಕೆ ಹೇಳುತ್ತಿದ್ದ ವ್ಯಕ್ತಿಯಾಗಿದ್ದರು. ನಾವು ಅಂತಹ ಒಬ್ಬ ಒಳ್ಳೆಯ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರು 102 ವರ್ಷಗಳ ಕಾಲ ಬದುಕಿದ್ದರು. ನಾವುಗಳು ಅಷ್ಟು ವರ್ಷಗಳ ಕಾಲ ಎಷ್ಟು ಜನರು ಬದುಕುತ್ತೇವೆಂದು ನಮಗೆ ಗೊತ್ತಿಲ್ಲ.

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು 100 ವರ್ಷಗಳ ಕಾಲ ಬದಕುತ್ತಾರೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ಬದುಕಿದರು ಬದುಕಬಹುದು. ನಾನು 100 ವರ್ಷಗಳ ಕಾಲ ಬದುಕಿದ್ದರೆ, ಆಗ ಮಾನ್ಯ ಸದಸ್ಯರಾದ ಶ್ರೀ ಸಲೀಂ ಅಹಮದ್‌ರವರು ಇದ್ದರೆ ಅವರಿಗೆ prize ಕೊಡುತ್ತೇನೆ. ನಾನು ಮತ್ತು ಮಾನ್ಯ ಸದಸ್ಯರು ಇಬ್ಬರು ಇದ್ದರೆ, ಅವರಿಗೆ prize ಕೊಡುತ್ತೇನೆಂದು ಹೇಳಿದೆ. **(ಗೊಂದಲ)** ಇಲ್ಲವೆಂದರೆ, ನಾನು ಏನಾದರೂ ಬೇಗ ಹೋದರೆ, ಅದಕ್ಕೆ ಯಾರು ಕಾರಣರೆಂದು ಬರೆದಿಟ್ಟು ಹೋಗುತ್ತೇನೆ.

ಶ್ರೀಯುತ ಡಾ॥ ಭೀಮಣ್ಣ ಖಂಡ್ರೆಯವರು ರಾಜಕೀಯ ವೇದಿಕೆಗಳಲ್ಲಿ ಇದ್ದು ಉತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ಸಮಾಜಕ್ಕೆ ಮಾದರಿಯಾಗಿ ಬದುಕಿದ್ದಾರೆ. ಶ್ರೀಯುತರ ಅಗಲಿಕೆಯ ನೋವವನ್ನು ಭರಿಸುವ ಶಕ್ತಿಯನ್ನು ಭಗವಂತ ಅವರ ಕುಟುಂಬದವರಿಗೆ ಕೊಡಲಿ ಎಂದು ಹಾಗೂ ಅವರ ಆತ್ಮಕ್ಕೆ ಶಾಂತಿಯು ಸಿಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ನಮಸ್ಕಾರ.

**ಸಭಾಪತಿಯವರು:-** ಈ ಸಂದರ್ಭದಲ್ಲಿ ಅವರ ಬಗೆಗಿನ ಒಂದು ವಿಷಯವನ್ನು ಸದನಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಶ್ರೀಯುತರಿಗೆ ಶಾಸಕರ ಭವನದಲ್ಲಿ ಕೊಠಡಿ ಕೊಡಲಿಲ್ಲ. ಆಗ ಅವರು ಬೇಗ ಬೇಗ ಬಂದು Legislative Assembly ಯಲ್ಲಿ Hon'ble Chief Minister chair ನಲ್ಲಿ ಕುಳಿತುಕೊಂಡರು. ನಂತರ Hon'ble Chief Minister ರವರು ಬಂದ ಮೇಲೆಯೂ ಸಹ ಅವರು ಆ ಸೀಟಿನಿಂದ ಎದ್ದೇಳಲಿಲ್ಲ. ನನಗೆ L.H. (Legislator's Home) ನಲ್ಲಿ room ಕೊಟ್ಟಾಗ ಎದ್ದು ಹೋಗುತ್ತೇನೆಂದು ಹೇಳಿ ಅಲ್ಲಿಯೇ ಕುಳಿತುಕೊಂಡಿದ್ದರು. ಕೊನೆಗೆ, ಆಗ ಮುಖ್ಯಮಂತ್ರಿಯಾಗಿದ್ದ ದಿವಂಗತ ಆರ್.ಗುಂಡೂರಾವ್‌ರವರು ಆದೇಶ ಮಾಡಿ room ಕೊಟ್ಟಾಗ ಅವರು ಆ ಸೀಟಿನಿಂದ ಮೇಲೆ ಎದ್ದರು.

ಮೃತರ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)**

**ಸಭಾಪತಿಯವರು:-** ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯ ನಿರ್ಣಯವನ್ನು ಮೃತ ಗಣ್ಯರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು.

ಈಗ ಸದನವನ್ನು ಜನವರಿ 23, 2026ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಮಧ್ಯಾಹ್ನ 12.00 ಗಂಟೆ 53 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 23ನೇ ಜನವರಿ ಮಾಹೆ 2026 ರ ಶುಕ್ರವಾರದಂದು ಬೆಳಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**